# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಜನವರಿ 18, 2022

ಸಂಪುಟ : 48 ಸಂಚಿಕೆ : 248 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




# ಜೀವನದ ಅಡಿಪಾಯ ಶಿಕ್ಷಣದಿಂದ ನಿರ್ಧಾರ

**ಜನತಾವಾಣಿ ಸಂಪಾದಕ ಎಂ.ಎಸ್. ವಿಕಾಸ್ ಅವರಿಂದ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಕ್ಯಾಲೆಂಡರ್ ಬಿಡುಗಡೆ**

ದಾವಣಗೆರೆ, ನ. 17 - ದಾವಣಗೆರೆ ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಕ್ಯಾಲೆಂಡರ್ ಅನ್ನು ಜನತಾವಾಣಿ ಸಂಪಾದಕ ಎಂ.ಎಸ್. ವಿಕಾಸ್ ಬಿಡುಗಡೆ ಮಾಡಿದ್ದಾರೆ.

ಪತ್ರಿಕಾ ಕಾರ್ಯಾಲಯದಲ್ಲಿ ಆಯೋಜಿಸಲಾಗಿದ್ದ ಸರಳ ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಬೇರೆಲ್ಲ ಉತ್ಪಾದನಾ ವಲಯಗಳಿಗೆ ಹೋಲಿಸಿದರೆ, ಶಿಕ್ಷಣ ಅತ್ಯಂತ ಮಹತ್ವದ್ದು. ವಿದ್ಯಾರ್ಥಿಗಳ ಇಡೀ ಜೀವನದ ಅಡಿಪಾಯ ಶಿಕ್ಷಣದಿಂದ ನಿರ್ಧಾರವಾಗುತ್ತದೆ ಎಂದರು.

ಮುಂದಿನ 30-40 ವರ್ಷಗಳಲ್ಲಿ ದೇಶಕ್ಕೆ ಅದ್ಭುತವಾದ ಭವಿಷ್ಯ ಬೇಕು ಎನ್ನುವುದಾದರೆ ಈಗಲೇ ಮಕ್ಕಳ ಶಿಕ್ಷಣಕ್ಕೆ ಒಳ್ಳೆಯ ಅಡಿಪಾಯ ಹಾಕಬೇಕು. ಇದಕ್ಕಾಗಿ ಸರ್ಕಾರ ಸೂಕ್ತ ನೀತಿಗಳ ಮೂಲಕ ಶಾಲೆಗಳಿಗೆ ಸಹಕರಿಸಬೇಕು ಎಂದು (2ನೇ ಪುಟಕ್ಕೆ)

# ಕರ್ಫ್ಯೂ ಕೈಬಿಡುವ ಚಿಂತನೆ

## ಅನಗತ್ಯ ಟೆಸ್ಟ್ ಕಡಿಮೆ ಮಾಡಲು ರಾಜ್ಯ ಸರ್ಕಾರದ ತೀರ್ಮಾನ

ಬೆಂಗಳೂರು, ಜ. 17 - ಕೊರೊನಾ ನಿಯಂತ್ರಣಕ್ಕೆ ರಾಜ್ಯದಲ್ಲಿ ಹೇರಲಾಗಿರುವ ವಾರಾಂತ್ಯದ ಕರ್ಫ್ಯೂ ಸಡಿಲಿಕೆ ಬಗ್ಗೆ ರಾಜ್ಯ ಸರ್ಕಾರ ಶುಕ್ರವಾರ ಮಹತ್ವದ ತೀರ್ಮಾನ ಕೈಗೊಳ್ಳಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ತಜ್ಞರು, ವೈದ್ಯರು ಹಾಗೂ ಅಧಿಕಾರಿಗಳು, ಹಿರಿಯ ಸಚಿವರೊಟ್ಟಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಮಾಲೋಚನೆ ನಡೆಸಿದ ನಂತರ ಸೋಂಕು ನಿಯಂತ್ರಣಕ್ಕೆ ಲಾಕ್‌ಡೌನ್ ಸೇರಿದಂತೆ ಮತ್ತಷ್ಟು ಕಠಿಣ ನಿಯಮಾವಳಿಗಳನ್ನು ಜಾರಿಗೊಳಸದಿರಲು ನಿರ್ಧರಿಸಲಾಗಿದೆ.

**ರಾಜ್ಯಾದ್ಯಂತ ವಾತಾವರಣ ಬದಲಾವಣೆಯಿಂದ ಶೀತ ಜ್ವರ ಎಲ್ಲೆಡೆ ಕಾಣಿಸಿಕೊಂಡಿದೆ. ಈ ಸೋಂಕು ತಗುಲಿದವರಿಗೆ ಅನಗತ್ಯವಾಗಿ ಕೊರೊನಾ ಪರೀಕ್ಷೆ ನಡೆಸುವುದು ಬೇಡ, ಈ ಸೋಂಕು ಸಾಮಾನ್ಯ ಚಿಕಿತ್ಸೆಯಿಂದಲೇ ಗುಣವಾಗುತ್ತದೆ. ಸೋಂಕು ವ್ಯಾಪಕವಾಗಿ ಹರಡುತ್ತಿರುವುದರಿಂದ ಜನಸಾಮಾನ್ಯರಿಗೆ ತಿಳುವಳಿಕೆ ನೀಡಲು ಮುಖ್ಯಮಂತ್ರಿಯವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.**

ಸೋಂಕು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ವಾರಾಂತ್ಯ ಕರ್ಫ್ಯೂನಲ್ಲೂ ಕೆಲವು ಸಡಿಲಿಕೆ ಮಾಡುವ ಬಗ್ಗೆ ಇಂದಿನ ಸಭೆಯಲ್ಲಿ ಪ್ರಸ್ತಾಪವಾಗಿದ್ದು, ತಜ್ಞರ ಸಲಹೆಯಂತೆ ಬರುವ ಶುಕ್ರವಾರ ಮತ್ತೊಂದು ಉನ್ನತ ಮಟ್ಟದ ಸಭೆ ನಡೆಸಿ, ಕರ್ಫ್ಯೂ ಸಡಿಲಿಕೆ ಇಲ್ಲವೇ ರದ್ದುಗೊಳಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆ.

ಕರ್ಫ್ಯೂ ಸಡಿಲಿಕೆ, ಶಾಲಾ-ಕಾಲೇಜುಗಳ ಬಂದ್ ಕೈ ಬಿಡುವುದು (2ನೇ ಪುಟಕ್ಕೆ)

# ಮಾರ್ಚ್‌ನಲ್ಲಿ 12-14ರ ಮಕ್ಕಳಿಗೆ ಲಸಿಕೆ

ನವದೆಹಲಿ, ಜ. 17 - ಮಾರ್ಚ್ ತಿಂಗಳಲ್ಲಿ 12-14 ವರ್ಷದ ಮಕ್ಕಳಿಗೆ ಕೊರೊನಾ ಲಸಿಕೆ ನೀಡಲು ಚಾಲನೆ ನೀಡುವ ಸಾಧ್ಯತೆ ಇದೆ ಎಂದು ಕೊರೊನಾ ಕುರಿತ ಸರ್ಕಾರಿ ಸಮಿತಿಯಾದ ಎನ್‌.ಟಿ.ಎ.ಜಿ.ಐ. ಅಧ್ಯಕ್ಷ ಡಾ. ಎನ್‌.ಕೆ. ಅರೋರ ಹೇಳಿದ್ದಾರೆ.

15-18 ವರ್ಷದ 7.4 ಕೋಟಿ ಮಕ್ಕಳಿದ್ದಾರೆ. ಇವರಲ್ಲಿ 3.45 ಕೋಟಿ ಮಕ್ಕಳು ಇದುವರೆಗೂ ಕೋವ್ಯಾಕ್ಸಿನ್ ಲಸಿಕೆಯ ಮೊದಲ ಡೋಸ್ ಪಡೆದಿದ್ದಾರೆ. 28 ದಿನಗಳ ನಂತರ ಎರಡನೇ ಡೋಸ್ ನೀಡಬೇಕಿದೆ. ಇದಾದ ನಂತರ 12-14ರ ಮಕ್ಕಳಿಗೆ ಲಸಿಕೆ ನೀಡುವ ಸಾಧ್ಯತೆ ಇದೆ ಎಂದವರು ಹೇಳಿದ್ದಾರೆ.

ಜನವರಿ ಅಂತ್ಯದ ಒಳಗೆ 15-18ರ ವಯೋಮಾನದವರಿಗೆ ಮೊದಲ ಡೋಸ್ ಲಸಿಕೆ ನೀಡುವ ಕಾರ್ಯ ಪೂರ್ಣವಾಗಲಿದೆ. ಫೆಬ್ರವರಿ ಅಂತ್ಯದೊಳಗೆ ಎರಡನೇ ಡೋಸ್ ಲಸಿಕೆ ಪೂರೈಕೆಯಾಗಲಿದೆ ಎಂದವರು ಹೇಳಿದ್ದಾರೆ.

12-14ರ ವಯೋಮಾನದ 7.5 ಕೋಟಿ ಮಕ್ಕಳಿದ್ದಾರೆ ಎಂದು ಅಂದಾಜಿಸಲಾಗಿದೆ. ಕಳೆದ ವರ್ಷವೇ ಲಸಿಕಾ ಅಭಿಯಾನ ಆರಂಭಿಸಲಾಗಿತ್ತಾದರೂ, ಮಕ್ಕಳ ಲಸಿಕೆ ಅಭಿಯಾನ ಈ ವರ್ಷದ ಆರಂಭದಲ್ಲಿ ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದೆ.

# ಬಲವಂತವಾಗಿ ಲಸಿಕೆ ಇಲ್ಲ: ಕೇಂದ್ರ

ನವದೆಹಲಿ, ಜ. 17 - ಯಾವುದೇ ವ್ಯಕ್ತಿಯ ಇಚ್ಛೆಗೆ ವಿರುದ್ಧವಾಗಿ ಕೊರೊನಾ ಲಸಿಕೆ ನೀಡಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್ ಎದುರು ತಿಳಿಸಿದೆ.

ಸುಪ್ರೀಂ ಕೋರ್ಟ್‌ನಲ್ಲಿ ಪ್ರಮಾಣ ಪತ್ರ ಸಲ್ಲಿಸಿರುವ ಕೇಂದ್ರ ಆರೋಗ್ಯ ಸಚಿವಾಲಯ, ದೇಶದ ಶೇ.90.84ರಷ್ಟು ಅರ್ಹ ವಯಸ್ಕರು ಮೊದಲ ಡೋಸ್ ಹಾಗೂ ಶೇ.61ರಷ್ಟು ಜನರು ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ ಎಂದು ಹೇಳಿದೆ. ಅಂಗವೈಕಲ್ಯತೆ ಹೊಂದಿರುವವರಿಗೆ ಕೊರೊನಾ ಲಸಿಕೆ ಪ್ರಮಾಣ ಪತ್ರ ಸಲ್ಲಿಸುವುದನ್ನು ಕಡ್ಡಾಯಗೊಳಿಸಬಾರದು ಎಂಬ ಅರ್ಜಿಗೆ ಪ್ರತಿಕ್ರಿಯಿಸಿರುವ ಕೇಂದ್ರ ಸರ್ಕಾರ, ಲಸಿಕೆ ಪ್ರಮಾಣ ಪತ್ರವನ್ನು ಯಾವುದೇ ಉದ್ದೇಶಕ್ಕೆ ಕಡ್ಡಾಯಗೊಳಿಸುವ ಮಾರ್ಗಸೂಚಿ ಪ್ರಕಟಿಸಿಲ್ಲ ಎಂದು ಹೇಳಿದೆ.




## ಓಂ ಸ್ಯಾರಿ ಸೆಂಟರ್ ಮಾಲೀಕರಾದ ನಾಗರಾಜ್ ಎಲ್. ಬದ್ದಿ ನಿಧನ

ದಾವಣಗೆರೆ ಚಾಮರಾಜಪೇಟೆಯಲ್ಲಿರುವ **ಓಂ ಸ್ಯಾರಿ ಸೆಂಟರ್** ಮಾಲೀಕರಾದ


**ಶ್ರೀ ನಾಗರಾಜ್ ಎಲ್. ಬದ್ದಿ**

ಅವರು ದಿನಾಂಕ 17.01.2022ರ ಸೋಮವಾರ ರಾತ್ರಿ 11.10 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 65 ವರ್ಷ ವಯಸ್ಸಾಗಿತ್ತು. ನಾಗರಾಜ್ ಅವರು, ದಾವಣಗೆರೆಯ ಹಿರಿಯ ಛಾಯಾಗ್ರಾಹಕರಾಗಿದ್ದ ದಿ. ಲಕ್ಷ್ಮಣ ಸಾ ಬದ್ದಿ ಮತ್ತು ಶ್ರೀಮತಿ ಕೃಷ್ಣಬಾಯಿ ದಂಪತಿ ಪುತ್ರ. ಐವರು ಸಹೋದರರು, ಓರ್ವ ಸಹೋದರಿ, ಪತ್ನಿ, ಮೂವರು ಪುತ್ರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು- ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ಮನೆ ಸಂಖ್ಯೆ 2035/201, 'ಅನ್ನಪೂರ್ಣೇಶ್ವರಿ', 13ನೇ ತಿರುವು, ಆಂಜನೇಯ ಬಡಾವಣೆ (ಜೀವ ಆಯುರ್ವೇದಿಕ್ ಆಸ್ಪತ್ರೆ ಪಕ್ಕ), ದಾವಣಗೆರೆ ಇಲ್ಲಿರುವ ಮೃತರ ಸ್ವಗೃಹದಲ್ಲಿ ದಿನಾಂಕ 18.01.2022ರ ಮಂಗಳವಾರ ಮಧ್ಯಾಹ್ನ 3ರವರೆಗೆ ಇಡಲಾಗುವುದು. ನಂತರ ಸಂಜೆ 4 ಗಂಟೆಗೆ ಪಿ.ಬಿ.ರಸ್ತೆಯ ವೈಕುಂಠಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

## ಜಗಳೂರಿನ ವೀರಶೈವ ಸಮಾಜದ ಮುಖಂಡ ಶ್ರೀ ವೇ. ಕೆ.ಎಂ. ವಿಶ್ವನಾಥ ಸ್ವಾಮಿ ಲಿಂಗೈಕ್ಯ

ಜನನ :
18-11-1938



ಲಿಂಗೈಕ್ಯ :
17-01-2022

ಜಗಳೂರು ತಾಲ್ಲೂಕಿನ ವೀರಶೈವ ಸಮಾಜದ ಮುಖಂಡರೂ,
ದಾವಣಗೆರೆ-ಚಿತ್ರದುರ್ಗ ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘದ ಸಂಸ್ಥಾಪಕ ಅಧ್ಯಕ್ಷರೂ,
ಜಗಳೂರಿನ ವಿಶ್ವನಾಥ್ ಮೆಡಿಕಲ್ ಸ್ಟೋರ್‌ನ ಮಾಲೀಕರೂ ಆದ

**ಶ್ರೀ ವೇ. ಕೆ.ಎಂ. ವಿಶ್ವನಾಥ ಸ್ವಾಮಿ**

ಅವರು ದಿನಾಂಕ 17. 01.2022ರ ಸೋಮವಾರ ಸಂಜೆ 7.20ಕ್ಕೆ ವಯೋಸಹಜತೆಯಿಂದ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರ 84 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಸಂಸ್ಕಾರವನ್ನು ದಿನಾಂಕ: 18.01.2022ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಜಗಳೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು

**ಜಗಳೂರು ತಾಲ್ಲೂಕು ಸಮಸ್ತ ಶಿಷ್ಯ ವೃಂದ ಹಾಗೂ ಕುಟುಂಬ ವರ್ಗ, ಬಂಧುಗಳು ಮತ್ತು ಮಿತ್ರರು.**

## ವಿನಾಯಕ ಸಿಟಿ ಬಸ್ ಮಾಲೀಕರಾದ

## ಧರ್ಮರತ್ನಾಕರ ಎಂ.ನಾಗರಾಜ್ ಕೂಡ್ಲಿಗೆರೆ ಲಿಂಗೈಕ್ಯ



ಭದ್ರಾವತಿ ತಾಲ್ಲೂಕು ಕೂಡ್ಲಿಗೆರೆ ಗ್ರಾಮದ ವೀರಶೈವ ಸಮಾಜದ
ಹಿರಿಯ ಮುಖಂಡರೂ, ವೀರಶೈವ ಪಂಚಪೀಠಗಳ ಭಕ್ತರೂ,
ದಾವಣಗೆರೆಯ ನಗರ ಸಾರಿಗೆ ವಿನಾಯಕ ಬಸ್ ಮಾಲೀಕರೂ ಆದ

**ಧರ್ಮರತ್ನಾಕರ ಶ್ರೀ ಎಂ. ನಾಗರಾಜ್ ಕೂಡ್ಲಿಗೆರೆ**

ಅವರು ದಿನಾಂಕ : 17.01.2022ರ ಸೋಮವಾರ ಮಧ್ಯಾಹ್ನ 2.00 ಗಂಟೆಗೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 66 ವರ್ಷ ವಯಸ್ಸಾಗಿತ್ತು.
ಶ್ರೀ ಎಂ. ನಾಗರಾಜ್ ಕೂಡ್ಲಿಗೆರೆ ಅವರು ನಗರ ಸಾರಿಗೆ ವಿನಾಯಕ ಬಸ್ಸಿನ ಶ್ರೀ ಎಂ.ಎನ್. ಹರೀಶ್ ಅವರ ತಂದೆ
ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 18.01.2022ರ ಮಂಗಳವಾರ ಮಧ್ಯಾಹ್ನ 12.30ಕ್ಕೆ ಕೂಡ್ಲಿಗೆರೆಯಲ್ಲಿರುವ ಅವರ ಸ್ವಂತ ತೋಟದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

ಫೋ. : 99027 99999

**ಬಿಲ್ಡಿಂಗ್ ಕೆಲಸ**
ಯಾವುದೇ ರೀತಿಯ ಕಟ್ಟಡ ಸಂಬಂಧಿತ ಕೆಲಸಗಳಾದ ಪೇಂಟಿಂಗ್, ನೀರಿನ ಲೀಕೇಜ್, (ವಾಟರ್ ಪ್ರೂಫಿಂಗ್) ಕಾರ್ಪೆಂಟರಿಂಗ್, ಪ್ಲಂಬಿಂಗ್, ಟೈಲ್ಸ್, ಗ್ರಾನೈಟ್, ಗಾರೆ, ದುರಸ್ಥಿ, ಡೆಮಾಲೇಷನ್, ಇತ್ಯಾದಿ ಕೆಲಸಕ್ಕೆ ಸಂಪರ್ಕಿಸಿ. ಒಂದಕ್ಕಿಂತ ಹೆಚ್ಚು ಕೆಲಸಕ್ಕೆ ರಿಯಾಯಿತಿ ಇರುತ್ತದೆ.
81050 40110
72046 33302

**ಮಾರಾಟಕ್ಕಿದೆ**
ಎಮಿಷನ್ ಟೆಸ್ಟಿಂಗ್ ಮಷಿನ್ + ಲೈಸೆನ್ಸ್ ಮಾರಾಟಕ್ಕಿದೆ.
80732 47892
88842 20711

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಆಸಕ್ತರು ಬಯೋಡಾಟಾ ಹಾಗೂ ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166
ಆಕರ್ಷಕ ವೇತನ ನೀಡಲಾಗುವುದು.

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
97315 12365

**ಸೈಟುಗಳು ಮಾರಾಟಕ್ಕಿವೆ**
ಬಾಲಾಜಿ ಲೇಔಟ್‌ನಲ್ಲಿ 30x50 ಉತ್ತರ.
ನಿಜಲಿಂಗಪ್ಪ ಬಡಾವಣೆಯಲ್ಲಿ 30x35 ಪಶ್ಚಿಮ.
ಬಸವೇಶ್ವರ ಬಡಾವಣೆಯಲ್ಲಿ 30x40 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
ಮೊ.97421 44715

**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ಎಂ.ಸಿ.ಸಿ. 'ಬಿ' ಬ್ಲಾಕ್, 2ನೇ ಕ್ರಾಸ್, ಗುಂಡಿ ಚೌಲ್ಪ್ರಿ ಪಕ್ಕ 1ನೇ ಮಹಡಿಯಲ್ಲಿ 1250 ಚದುರಡಿಯ ಕಾರ್ನರ್ ಮಳಿಗೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ :
ಮೊ. 98863-74731

**ಬಾಡಿಗೆಗೆ ಇದೆ**
ಹದಡಿ ರಸ್ತೆಯಲ್ಲಿರುವ ಎಂ.ಎಂ. ಫಾರ್ಮಾಲಿಂಕ್ಸ್‌ನ ಬಿಲ್ಡಿಂಗ್‌ನಲ್ಲಿ ಫಸ್ಟ್ ಫ್ಲೋರ್ 23x75 ಅಳತೆಯ ಮಳಿಗೆ ಬಾಡಿಗೆಗೆ ಇದೆ.
ವಿಳಾಸ : M.M. Pharmalinks, #491/3C, Hadadi Road, Davangere.
78991 77660

**ಬೇಕಾಗಿದ್ದಾರೆ**
ಎಸ್ ಎಸ್ ಲೇಔಟ್ 'ಬಿ' ಬ್ಲಾಕ್‌ನಲ್ಲಿರುವ ಮನೆಯಲ್ಲಿ ಅಡುಗೆ ಮಾಡಲು ಬೇಕಾಗಿದ್ದಾರೆ.
ಬೆಳಿಗ್ಗೆ 6.30 - 8.30 ವರೆಗೆ.
08192-223966

**ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆಗಳು, ಸೈಟುಗಳು ಮಾರಾಟಕ್ಕಿವೆ**
30x50 ಮನೆ, 30x40 ಮನೆ, 40x60 East, 40x60 West, 40x60 South, 30x50 East, 34x40 West.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
ಮಹಿಳಾ ಜವಾನರು ಬೇಕಾಗಿದ್ದಾರೆ. ಆಯ್ಕೆಯಾದ ಅಭ್ಯರ್ಥಿಗೆ ಆಕರ್ಷಕ ವೇತನದೊಂದಿಗೆ ಮಗುವಿಗೆ ಉಚಿತ ಶಿಕ್ಷಣ ನೀಡಲಾಗುವುದು. ಸಂಪರ್ಕಿಸಿ :
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ
ಕೊಂಡಜ್ಜಿ ರಸ್ತೆ, ಹೊಸ RTO ಕಚೇರಿ ಹಿಂಭಾಗದ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, ದಾವಣಗೆರೆ.
ಮೊ.99640 17729

**HOUSE FOR LEASE OR RENT**
2 BHK, 1st Floor with Lift facility. Doggalli Compound K.R Road Cross near LIC Office, Davanagere.
Contact: 94483 76399

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್‌ನಲ್ಲಿ, ಡಾಲರ್ಸ್ ಕಾಲೋನಿಯಲ್ಲಿ
70x63 Corner, 30x63 Corner, 40x61 East, 30x47 East, 30x50 West, 30x40 West, 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
ನಿಟ್ಟುವಳ್ಳಿ ಸರ್ಕಾರಿ ಶಾಲೆಯಲ್ಲಿ ಮಕ್ಕಳಿಗೆ ಕಂಪ್ಯೂಟರ್ ಕಲಿಸಲು ಕಂಪ್ಯೂಟರ್ ಕಲಿತು, ಅನುಭವವಿರುವವರು ಬೇಕಾಗಿದ್ದು, ಶಾಲೆಯಲ್ಲಿ ಅರ್ಜಿ ಸಲ್ಲಿಸಿ.
76194 33105

**ಸಂಘ-ಸಂಸ್ಥೆ, NGO, ಟ್ರಸ್ಟ್‌ಗಳ GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**ದೊರೆಯುತ್ತದೆ**
ತಂತಿಯ ಕಲ್ಲು 6 ಅಡಿ, 7 ಅಡಿ ಹಾಗೂ ಅಡಿಕೆ ಸಸಿ, ತೆಂಗಿನ ಸಸಿ ದೊರೆಯುತ್ತದೆ. ಕೊಮಾರನಹಳ್ಳಿ, ಹರಿಹರ (ತಾ), ದಾವಣಗೆರೆ (ಜಿ)
ಸಂಪರ್ಕಿಸಿ:
94831 88758, 96323 55758

**ಮನೆ ಬಾಡಿಗೆಗೆ ಇದೆ**
ಎಂಸಿಸಿ 'ಎ' ಬ್ಲಾಕ್ 5ನೇ ಮುಖ್ಯ ರಸ್ತೆಯಲ್ಲಿ 24 ತಾಸು ನೀರಿನ ವ್ಯವಸ್ಥೆಯಿರುವ 1 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ವಿಚಾರಿಸಿ
99646 36665

**ಬೇಕಾಗಿದ್ದಾರೆ**
ಸೋಲಾರ್ ಆಫೀಸ್‌ಗೆ ಸೇಲ್ಸ್ ಮ್ಯಾನೇಜರ್ -1, ಸೇಲ್ಸ್ ಎಕ್ಸಿಕ್ಯೂಟಿವ್ಸ್-2 ಮತ್ತು ಅಡುಗೆ ಮನೆ ಕೆಲಸಕ್ಕೆ -1 (ಮಹಿಳೆ)
99646 13790

**ಬೇಕಾಗಿದ್ದಾರೆ**
ಮನೆಯಲ್ಲಿ ಅಡುಗೆ ಮಾಡುವವರು ಬೇಕಾಗಿದ್ದಾರೆ. ಸಮಯ: ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 2 ರವರೆಗೆ.
ಮನೆ ವಿಳಾಸ: ಹೈಟೆಕ್ ಹಾಸ್ಪಿಟಲ್ ಹತ್ತಿರ.
ಆಸಕ್ತಿ ಇರುವ ಹೆಣ್ಣು ಮಕ್ಕಳು ಈ ನಂಬರಿಗೆ ಸಂಪರ್ಕಿಸಿ: 83102 57998

**ಬೇಕಾಗಿದ್ದಾರೆ**
ಮನೆಯಲ್ಲಿ ವಯಸ್ಸಾದವರನ್ನು ನೋಡಿಕೊಳ್ಳಬೇಕು ಮತ್ತು ಅಡುಗೆ ಇತ್ಯಾದಿ ಬೆ. 9 ರಿಂದ ರಾತ್ರಿ 8ರವರೆಗೆ, ಸಂಬಳ 6000 ರಿಂದ 8000 ರೂ.
ಫೋ. : 97426 54740

**Commercial Building For Rent**
16×50 Measuring & Commercial Shop. 133/4 Opp LIC Office, K.R Road, Davanagere.
Contact: 94483 76399

**ಸೈಟ್ ಮಾರಾಟಕ್ಕೆ**
ದಾವಣಗೆರೆ ಎಸ್‌ಪಿ ಕಚೇರಿ ಎದುರುಗಡೆ ಇರುವ ಸ.ನಂ. 127/2ಎ2, 30x50 (ಉತ್ತರ) ಅಳತೆಯ ಖಾಲಿ ನಿವೇಶನ ಮಾರಾಟಕ್ಕಿದೆ. ಸಂಪರ್ಕಿಸಿ:
99804 38600
72596 78135

**ಬೇಕಾಗಿದ್ದಾರೆ**
Xerox ಅಂಗಡಿಯಲ್ಲಿ ಪಾರ್ಟ್ ಟೈಂ ಕೆಲಸಕ್ಕೆ ಬೇಕಾಗಿದ್ದಾರೆ.
ಸಮಯ : ಸಂಜೆ 6 ರಿಂದ 9ರವರೆಗೆ
96637 94777

**BASIC - 600/-**
**DTP - 600/-**
**PHOTOSHOP - 800/-**
3 days offer only
97426 10385

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**DULL IN MATHS**
Memory Techniques course for kids
Eligible 3rd STD to 7th STD
Bruit Abacus & Vedic Maths
Nijalingappa Badavane
97390 66956

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**JOB ORIENTED COURSES**
SPOKEN ENGLISH, PHOTOSHOP & CORELDRAW, C,C++, JAVA, PYTHON, CATIA, AUTOCAD, REVIT SCHOOL PROJECTS
Ph:89712 79127

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**ಓಂ ಶ್ರೀ ಸಾಯಿದತ್ತ ಜ್ಯೋತಿಷ್ಯ ಕೇಂದ್ರ**
ಪಂಡಿತ್ ಶ್ರೀ ರಾಮ್ ಭಟ್
ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಆರೋಗ್ಯ, ಸ್ತ್ರೀ - ಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿ ಮೋಸ ಇನ್ನಿತರೆ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ. ಇಲ್ಲದಿದ್ದಲ್ಲಿ ಹಣ ವಾಪಸ್ ನೀಡಲಾಗುವುದು. ಇಂದೇ ಕರೆ ಮಾಡಿ
98862 30791

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಚೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ಹೆಸರು ಬದಲಾವಣೆ**
ನಾನು ಶ್ರೀ ಡಾ॥ ಅರುಣ್‌ಚಂದ್ರ ಬಿ. # 1599, ಎಸ್.ಹೆಚ್. ರೋಡ್, ಮಲೇಬೆನ್ನೂರು, ಹರಿಹರ ತಾ॥ ವಾಸಿಯಾದ ನಾನು ನನ್ನ ಹೆಂಡತಿ ಶ್ರೀಮತಿ ಅನಿತಾ ಎನ್. ನಮಗೆ ದಿನಾಂಕ : 7.9.2021 ರಂದು ಲತಾ ನರ್ಸಿಂಗ್ ಹೋಂ, ದಾವಣಗೆರೆಯಲ್ಲಿ ಹೆಣ್ಣು ಮಗು ಜನನವಾಗಿದ್ದು, ಇವಳ ಹೆಸರನ್ನು Manushi Arun B. (ಮನುಷಿ ಅರುಣ್ ಬಿ.) ಎಂಬುದರ ಬದಲಾಗಿ ಆಶ್ಲೇಷ ಅರುಣ್ ಎಂದು ಜನನ ಪ್ರಮಾಣ ಪತ್ರದಲ್ಲಿ ನಮೂದಾಗಿದೆ. ಸಂಖ್ಯೆ 803127/T/B/2021/007318 ಆದ್ದರಿಂದ ದಿನಾಂಕ : 29.12.2021 ರಂದು ನೋಟರಿ ದಾವಣಗೆರೆಯವರ ಸಮಕ್ಷಮ ನನ್ನ ಮಗಳ ಹೆಸರು ಮನುಷಿ ಅರುಣ್ ಬಿ. (Manushi Arun B.) ಎಂದು ಹೆಸರು ತಿದ್ದುಪಡಿಯನ್ನು ಆಯುಕ್ತರು, ಜನನ ಮತ್ತು ಮರಣ ಪ್ರಮಾಣಗಳ ನೋಂದಣಾಧಿಕಾರಿಗಳು, ಮಹಾನಗರ ಪಾಲಿಕೆ, ದಾವಣಗೆರೆ ಇಲ್ಲಿ ಜನನ ಪ್ರಮಾಣ ಪತ್ರದಲ್ಲಿನ ಖಾಯಂ ಹೆಸರನ್ನು ಮನುಷಿ ಅರುಣ್ ಬಿ. ಎಂದು ತಿದ್ದುಪಡಿ ಮಾಡಿಸಿರುತ್ತೇನೆ.
ಸಹಿ/- ಡಾ॥ ಅರುಣ್ ಚಂದ್ರ, ಬಿ.

**ಬೇಕಾಗಿದ್ದಾರೆ**
ಐಶರ್ ಟ್ರ್ಯಾಕ್ಟರ್ ಶೋ ರೂಂನಲ್ಲಿ ಕೆಲಸ ಮಾಡಲು ದಾವಣಗೆರೆ, ಹರಿಹರ, ಹರಪನಹಳ್ಳಿಗೆ ಮಾರಾಟ ಪ್ರತಿನಿಧಿಗಳು - 06, ಸ್ಪೇರ್ ಇನ್ ಚಾರ್ಜ್-01 ಮತ್ತು ಆಫೀಸ್ ಬಾಯ್-01 ಬೇಕಾಗಿದ್ದಾರೆ, ಸ್ವಂತ ದ್ವಿಚಕ್ರ ವಾಹನವಿರಬೇಕು, ಲೈಸೆನ್ಸ್ ಇರಬೇಕು. ಆಕರ್ಷಕ ಸಂಬಳ + Incentive +TA, DA ಕೊಡಲಾಗುವುದು. ಸಂಪರ್ಕಿಸಿ:
ಶಾರದಾ ಆಟೋಸ್
KSRTC ಬಸ್ ಸ್ಟ್ಯಾಂಡ್ ಹತ್ತಿರ, ದಾವಣಗೆರೆ.
sharadaautosdavangere@gmail.com
ಮೊ: 99002 56457

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


# ದೇಶವನ್ನು ಕಟ್ಟಲು ಒಳ್ಳೆಯ ಹವ್ಯಾಸ ಬೆಳೆಸಿಕೊಳ್ಳಿ

ಹರಿಹರ, ಜ. 17- ಯುವಕರು ಈ ದೇಶದ ಶಕ್ತಿ, ಸದೃಢ ಭಾರತ ಕಟ್ಟಲು ತಾವುಗಳು ಜೀವನ ದಲ್ಲಿ ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕೆಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಹೇಳಿದರು.

ನಗರದ ಎಸ್‌ಜೆವಿಪಿ ಕಾಲೇಜು ಸಭಾಂಗಣ ದಲ್ಲಿ ತಾಲ್ಲೂಕು ಆಡಳಿತ, ತಾಪಂ, ಆರೋಗ್ಯ ಇಲಾಖೆ, ಕಾನೂನು ಸೇವಾ ಪ್ರಾಧಿಕಾರ, ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಶ್ರೀ ಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಪದವಿ ಕಾಲೇಜು ಇವರ ಸಹಯೋಗದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದಿಂದ ಶುಕ್ರವಾರ ಆಯೋಜಿಸಿದ್ದ 'ಗುಲಾಬಿ ಹಿಡಿ, ತಂಬಾಕು ಬಿಡಿ' ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಹರಿಹರದಲ್ಲಿನ 'ಗುಲಾಬಿ ಹಿಡಿ, ತಂಬಾಕು ಬಿಡಿ' ಎಂಬ ಜಾಗೃತಿ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ

ಅಂಕಿ-ಅಂಶಗಳ ಪ್ರಕಾರ 14.8 ರಷ್ಟು ಯುವಕರು ಮತ್ತು ಯುವತಿಯರು ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಸಿಪಿಐ ಯು.ಸತೀಶ್ ಮಾತನಾಡಿ, ಶೈಕ್ಷಣಿಕ ಸಂಸ್ಥೆಯಿಂದ 100 ಗಜದ ಸುತ್ತಳತೆಯೊಳಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡು ವುದು ಅಪರಾಧ. ಕಾಲೇಜ್ ಅಂಗಳ ದಲ್ಲಿ ಯುವಕರು ತಂಬಾಕು ಉತ್ಪನ್ನಗಳನ್ನು ಸೇವನೆ ಮಾಡಿದಲ್ಲಿ ಅಂಥವರ ಮೇಲೂ ಕಾನೂನಿನ ಅಡಿಯಲ್ಲಿ ಪ್ರಾಚಾರ್ಯರು ಕ್ರಮ ತೆಗೆದುಕೊಳ್ಳಬಹುದೆಂದರು.

ಸಂಸ್ಥೆಯ ಸಿಇಒ ಡಾ.ಎಸ್.ಹೆಚ್. ಪ್ಯಾಟಿ ಮಾತನಾಡಿ, ಪ್ರತಿಯೊಬ್ಬರೂ ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರ ಜೊತೆಗೆ ಬದುಕಿನಲ್ಲಿ ಪ್ರಮುಖವಾಗಿ ಶಿಸ್ತನ್ನು ರೂಢಿಸಿಕೊಳ್ಳಬೇಕೆಂದರು.

ತಾಲ್ಲೂಕು ಪತ್ರಕರ್ತರ ಸಂಘದ ನಿಕಟ ಪೂರ್ವ ಅಧ್ಯಕ್ಷ ಶೇಖರ್ ಗೌಡ ಪಾಟೀಲ್ ಮಾತನಾಡಿ, ಈ ದೇಶದಲ್ಲಿ ಹುತಾತ್ಮರಾದ ಮಹಾತ್ಮರು, ಸಂತರು, ಚಿಂತಕರು, ಕವಿಗಳು ಹಾಗೂ ಹೋರಾಟಗಾರರ ಬದುಕು ಯುವಜನರಿಗೆ ಆದರ್ಶವಾಗಬೇಕು ಎಂದರು.

ಟಿಎಚ್‌ಓ ಡಾ.ಚಂದ್ರಮೋಹನ್ ಪ್ರಸ್ತಾವನೆ ಮಾಡಿ 'ಗುಲಾಬಿ ಹಿಡಿ, ತಂಬಾಕು ಬಿಡಿ' ಎಂಬ ಘೋಷ ವಾಕ್ಯದೊಂದಿಗೆ ಯುವಕರು ತಂಬಾಕು ಉತ್ಪನ್ನಗಳ ದುಶ್ಚಟಕ್ಕೆ ಬಲಿಯಾಗುವುದನ್ನು ತಡೆಯಲು ಜಾಗೃತಿ ಮೂಡಿಸುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಪ್ರೊ. ಜಿ.ಎಂ. ಮುರಿಗಿಸ್ವಾಮಿ ಮಾತನಾಡಿದರು.

ಜಿಲ್ಲಾ ಆರೋಗ್ಯ ಮೇಲ್ವಿಚಾರಕ ಎಂ.ವಿ.ಹೊರಕೇರಿ, ಹಿರಿಯ ಆರೋಗ್ಯ ನಿರೀಕ್ಷಕ ಎಂ.ಉಮ್ಮಣ್ಣ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಲಹೆಗಾರ ದೇವರಾಜ್, ಸಾಮಾಜಿಕ ಕಾರ್ಯಕರ್ತ ಸತೀಶ್, ಸುಧಾ ಸುಲಾಕಿ, ದಾದಾಪೀರ್ ಹಾಗೂ ಇತರರಿದ್ದರು.

# ಮಲೇಬೆನ್ನೂರಿನ 3 ಕಾಲೇಜುಗಳು ವಾರ ಬಂದ್

ಮಲೇಬೆನ್ನೂರು, ಜ.17- ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ಬೀರಲಿಂಗೇಶ್ವರ ಹೆಣ್ಣುಮಕ್ಕಳ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಸೋಂಕು ದೃಢ ಪಟ್ಟ ಹಿನ್ನೆಲೆಯಲ್ಲಿ ಸೋಮವಾರ ವಿವಿಧ ಶಾಲೆಗಳಲ್ಲಿ ಕೋವಿಡ್ ಟೆಸ್ಟ್ ಮಾಡಲಾಯಿತು. ಸೋಂಕು ಕಾಣಿಸಿಕೊಂಡಿರುವ ಎರಡು ಕಾಲೇಜುಗಳ ನಡುವೆ ಇರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಸೋಮವಾರ ವಿದ್ಯಾರ್ಥಿಗಳ ಸಂಖ್ಯೆ ದಿಢೀರ್ ಕುಸಿತ ಕಂಡಿತ್ತು.



333 ವಿದ್ಯಾರ್ಥಿಗಳ ಪೈಕಿ 75 ವಿದ್ಯಾರ್ಥಿಗಳು ಮಾತ್ರ ಶಾಲೆಗೆ ಆಗಮಿಸಿದ್ದರು. ಅವರೆಲ್ಲರಿಗೂ ಮತ್ತು ಶಿಕ್ಷಕರಿಗೆ ಕೋವಿಡ್ ಟೆಸ್ಟ್ ಮಾಡಿಸಿದಾಗ 8 ವಿದ್ಯಾರ್ಥಿಗಳಿಗೆ ಹಾಗೂ ಇಬ್ಬರು ಶಿಕ್ಷಕರಿಗೆ ಪಾಸಿಟಿವ್ ಬಂದಿದೆ. ಅಲ್ಲದೆ, ಸರ್ಕಾರಿ ಉರ್ದು ಪ್ರೌಢಶಾಲೆಯಲ್ಲಿ 9 ಶಿಕ್ಷಕರು ಟೆಸ್ಟಿಗೆ ಒಳಗಾದಾಗ ಇಬ್ಬರಿಗೆ ಮತ್ತು ಪಿಡಬ್ಲ್ಯೂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಒಬ್ಬ ಶಿಕ್ಷಕರಿಗೆ ಹಾಗೂ ಇಬ್ಬರು ವಿದ್ಯಾರ್ಥಿಗಳಿಗೆ ಸೋಂಕು ಕಾಣಿಸಿಕೊಂಡಿದೆ.

ಜಾಮಿಯಾ ನ್ಯಾಷನಲ್ ಉರ್ದು ಶಾಲೆಯಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸೇರಿ ಒಟ್ಟು 83 ಜನರಿಗೆ ಟೆಸ್ಟ್ ಮಾಡಿದಾಗ ಮೂವರಿಗೆ ಸೋಂಕು ತಗುಲಿದೆ.

ಅಂಚೆ ಕಚೇರಿಯಲ್ಲಿ ಒಬ್ಬರಿಗೆ ಸೋಂಕು ದೃಢಪಟ್ಟಿದೆ. ಸರ್ಕಾರಿ ಪ್ರೌಢಶಾಲೆಗೆ ಒಂದು ವಾರ ರಜೆ ಘೋಷಿಸಲಾಗಿದೆ. ಇದರಿಂದಾಗಿ ಆ ಇಡೀ ಕ್ಯಾಂಪಸ್ ಬಿಕೋ ಎನ್ನುತ್ತಿತ್ತು.

**279 ಕೋವಿಡ್ ಟೆಸ್ಟ್‌ನಲ್ಲಿ 18 ಜನರಿಗೆ ಪಾಸಿಟಿವ್**

ಸೋಮವಾರ ಪಟ್ಟಣದಲ್ಲಿ ಎಲ್ಲಾ ಶಾಲೆಗಳಲ್ಲಿ ಸೇರಿ ಒಟ್ಟು 279 ಕೋವಿಡ್ ಟೆಸ್ಟ್ ಆಗಿದ್ದು, 18 ಜನರಿಗೆ ಸೋಂಕು ದೃಢಪಟ್ಟಿದೆ.

ಟಿಹೆಚ್‌ಓ ಡಾ. ಚಂದ್ರಮೋಹನ್, ತಾಲ್ಲೂಕು ಹಿರಿಯ ಆರೋಗ್ಯ ವಿಸ್ತರಣಾಧಿಕಾರಿ ಎಂ. ಉಮ್ಮಣ್ಣ, ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ ರುಕ್ಮಿಣಿ, ವೈದ್ಯಾಧಿಕಾರಿ ಡಾ. ಲಕ್ಷ್ಮಿ ದೇವಿ, ಸರ್ಕಾರಿ ಪ್ರೌಢಶಾಲೆಯ ಪ್ರಭಾರ ಉಪಪ್ರಾಚಾರ್ಯ ರಾಮಣ್ಣ ಸೋಮಣ್ಣನವರ್ ಈ ವೇಳೆ ಹಾಜರಿದ್ದರು. ಬೀರಲಿಂಗೇಶ್ವರ ಕಾಲೇಜು ಮತ್ತು ಸರ್ಕಾರಿ ಪ್ರೌಢಶಾಲೆಯ ಕೊಠಡಿಗಳನ್ನು ಪುರಸಭೆಯ ಪೌರ ಕಾರ್ಮಿಕರು ಸ್ಯಾನಿಟೈಜ್ ಮಾಡಿದರು.

## ಶಿಕ್ಷಣದಿಂದ ನಿರ್ಧಾರ

(1ನೇ ಪುಟದಿಂದ) ಅಭಿಪ್ರಾಯಪಟ್ಟರು.ಒಕ್ಕೂಟದ ಕಾರ್ಯಾಧ್ಯಕ್ಷ ಕೆ.ಸಿ. ಲಿಂಗರಾಜು, ಉಪಾಧ್ಯಕ್ಷರಾದ ಎಂ.ಎಸ್. ಸಂತೋಷ್‌ಕುಮಾರ್, ಆರ್.ಎಲ್. ಪ್ರಭಾಕರ್, ಸಹ ಕಾರ್ಯದರ್ಶಿಗಳಾದ ಕೆ.ಎಸ್. ಮಂಜುನಾಥ ಅಗಡಿ, ಎ.ಎನ್. ಪ್ರಸನ್ನ ಕುಮಾರ್, ಖಜಾಂಚಿ ವಿಜಯ್ ರಾಜ್, ಸಂಘಟನಾ ಕಾರ್ಯದರ್ಶಿಗ ಳಾದ ಕೆ.ಸಿ. ಮಂಜು, ಹೆಚ್.ಜೆ. ಮೈನುದ್ದೀನ್, ಸಂಚಾಲಕರಾದ ಕೆ.ಎಸ್. ಪ್ರಭುಕುಮಾರ್, ಎಂ.ಎನ್. ಲೋಕೇಶ್, ಸೈಯದ್ ಮನ್ ಪುಶ್, ನಿರ್ದೇಶಕರಾದ ವಿಜಯ್ ಕುಮಾರ್, ಹೆಚ್. ಜಯಣ್ಣ, ಬಿ. ಶಶಿಧರ್, ಸಹನಾ ರವಿ, ಬಿ. ಅನುಸೂಯ, ಡಿ.ವಿ. ನಾಗರಾಜ ಶೆಟ್ಟಿ, ಟಿ.ಕೆ. ಪೃಥ್ವಿರಾಜ್, ಕೆ. ಸುರೇಶ, ಪಿ.ಎಸ್. ಅರವಿಂದ, ಟಿ.ಆರ್. ರವಿ, ಅಶ್ವಿನಿ ಕೃಷ್ಣ ಉಪಸ್ಥಿತರಿದ್ದರು.

## ತರಳಬಾಳು ಕೃಷಿ ಕೇಂದ್ರದಿಂದ ಎಣ್ಣೆಕಾಳು ಬೆಳೆಗಳ ಪ್ರಾತ್ಯಕ್ಷಿಕೆ




ಜಗಳೂರು, ಜ.17- ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಜಗಳೂರು ತಾಲ್ಲೂಕಿನ ಸಿದ್ದಮ್ಮನಹಳ್ಳಿ ಗ್ರಾಮದ ರಾಷ್ಟ್ರೀಯ ಎಣ್ಣೆಕಾಳು ಯೋಜನೆಯ ಗುಚ್ಛ ಗ್ರಾಮಗಳ ಮುಂಚೂಣಿ ಪ್ರಾತ್ಯಕ್ಷಿಕೆಯ ಸಮಗ್ರ ಬೆಳೆ ನಿರ್ವಹಣೆ ಶೇಂಗಾ ತಾಕುಗಳಿಗೆ ಕೇಂದ್ರದ ವಿಜ್ಞಾನಿಗಳು ಭೇಟಿ ನೀಡಿದರು.

ಬೇಸಾಯ ತಜ್ಞ ಮಲ್ಲಿಕಾರ್ಜುನ್ ಅವರು, ಶೇಂಗಾ ಬೆಳೆಯ ನವೀನ ತಳಿಯಾದ G2 52 ಉತ್ತಮವಾಗಿ ಮೊಳಕೆ ಹೊಡೆದಿದ್ದು, 15 ದಿನಗಳಾದ ನಂತರ ಜಿಪ್ಸಂ 200 ಕೆಜಿ ಪ್ರತಿ ಎಕರೆಗೆ ಬಳಸಬೇಕೆಂದು ತಿಳಿಸಿದರು.

ಭೇಟಿಯ ಸಂದರ್ಭದಲ್ಲಿ ಎಂ.ಜಿ.ಬಸವನಗೌಡ, ರಘುರಾಜ್, ಪ್ರಗತಿಪರ ರೈತ ಮಹಾಂತೇಶ್ ಭಾಗವಹಿಸಿದ್ದರು.

## ಕರ್ಫ್ಯೂ ಕೈಬಿಡುವ ಚಿಂತನೆ

(1ನೇ ಪುಟದಿಂದ) ಮತ್ತು ಆರ್ಥಿಕ ಪುನಶ್ಚೇತನಕ್ಕೆ ಅನುವು ಮಾಡಿಕೊಡುವ ಎಲ್ಲ ನಿರ್ಧಾರಗಳನ್ನು ಮುಂದಿನ ಸಭೆಯಲ್ಲಿ ತೆಗೆದುಕೊಳ್ಳಲಾಗುವುದು.

ಕೇಂದ್ರ ಮತ್ತು ತಜ್ಞರ ಸಲಹೆಯಂತೆ ಕೋವಿಡ್ ಪರೀಕ್ಷೆಗಳನ್ನು ಕಡಿಮೆ ಮಾಡಲು ಸಭೆ ನಿರ್ಧರಿಸಿದೆ.

ಕೊರೊನಾ ಲಸಿಕೆಗಳನ್ನು ಪಡೆಯದ ವರಿಗೆ ವ್ಯಾಪಕವಾಗಿ ಲಸಿಕೆ ನೀಡಲು ಅಗತ್ಯ ಕ್ರಮ ಕೈಗೊಳ್ಳಿ. 12 ರಿಂದ 14 ವರ್ಷದ ಮಕ್ಕಳಿಗೂ ಮಾರ್ಚ್‌ನಲ್ಲಿ ಲಸಿಕೆ ದೊರೆಯಬಹುದು. ಇದಕ್ಕೆ ಪೂರ್ವ ಸಿದ್ದತೆ ಮಾಡಿಕೊಳ್ಳಿ ಎಂದು ಅಧಿಕಾರಿಗಳಿಗೆ ತಿಳಿಸಿದ್ದಲ್ಲದೆ, 15 ರಿಂದ 18 ವರ್ಷದ ಮಕ್ಕಳಿಗೆ ನೀಡಲಾಗುತ್ತಿರುವ ಮೊದಲನೇ ಲಸಿಕೆಗಳನ್ನು ಇನ್ನು 15 ದಿನದಲ್ಲಿ ಎಲ್ಲರಿಗೂ ದೊರೆಯಬೇಕು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದ್ದಾರೆ.

ಆಯಾ ಶಾಲೆಗಳಿಗೆ ತೆರಳಿ, ಲಸಿಕೆಗಳನ್ನು ನೀಡುವಂತೆ ಆರೋಗ್ಯ ಇಲಾಖೆಗೆ ಸೂಚಿಸಲಾಗಿದೆ. ಕೋವಿಡ್ ಹತ್ತಿಕ್ಕಲು ಲಾಕ್‌ಡೌನ್ ಅಗತ್ಯವಿಲ್ಲ ಎಂದು ಪ್ರಧಾನಿಯವರು ಸ್ಪಷ್ಟವಾಗಿ ತಿಳಿಸಿದ್ದಾರೆ. ನಾವು ಈ ಸೋಂಕಿಗೆ ಇತಿಶ್ರೀ ಹಾಡಲು ಲಸಿಕೆಗಳು ಒಂದೇ ಮದ್ದು. ಹೀಗಾಗಿ ಲಸಿಕೆ ಪಡೆಯದವರನ್ನು ಹುಡುಕಿ ಲಸಿಕೆ ಕೊಡಿಸಿ ಎಂದು ಆದೇಶ ಮಾಡಿದ್ದಾರೆ.

# ರಾಣೇಬೆನ್ನೂರು ಶಾಸಕರ ಅನುದಾನ ದುರ್ಬಳಕೆ

ರಾಣೇಬೆನ್ನೂರು, ಜ. 17- ಸರ್ಕಾರದ ನಿಯಮಾನುಸಾರ ಶಾಸಕರ ಅನುದಾನ ಬಳಕೆಯಾಗುತ್ತಿಲ್ಲ. ಅತಿಯಾದ ಭ್ರಷ್ಟಾಚಾರ ನಡೆದಿದೆ. ಕ್ಷೇತ್ರದಲ್ಲಿ ಅಭಿವೃದ್ಧಿ ಮರೀಚಿಕೆಯಾಗಿದೆ ಎಂದು ಆರೋಪಿಸಿರುವ ತಾಲ್ಲೂಕು ರೈತ ಸಂಘದ ಅಧ್ಯಕ್ಷ ಹನುಮಂತಪ್ಪ ಡಿ. ಕಬ್ಬಾರ ಪತ್ರಿಕಾಗೋಷ್ಠಿಯಲ್ಲಿ ಲಿಖಿತ ಹೇಳಿಕೆ ಬಿಡುಗಡೆ ಮಾಡಿದರು.



ರೈತ ಸಂಘದ ಆರೋಪ

ಎರಡು ಎಸ್ಸಿ ಮನೆಗಳಿರುವ ಒಡೆರಾಯನ ಹಳ್ಳಿಯಲ್ಲಿ 5 ಲಕ್ಷದಲ್ಲಿ ಹೈಮಾಸ್ಟ್ ದೀಪ ಹಾಕಿಸಿದ್ದೀರಿ. ಅವಶ್ಯವಿರುವ 6 ಗ್ರಾಮಗಳಲ್ಲಿ ಎಸ್ಸಿ ಕಾಲೋನಿ ಹೊರತುಪಡಿಸಿ, ಬೇರೆ ಕಡೆ ಹಾಕಿಸಿದ್ದೀರಿ. 2019-20ರಲ್ಲಿ ನೀಡಲಾದ 1 ಕೋಟಿ ಅನುದಾನದ ಬಳಕೆ ಎಲ್ಲಿ ಆಗಿದೆ ಎನ್ನುವ ಮಾಹಿತಿ ಇಲ್ಲ. 20 ರಿಂದ 25 ಸಮುದಾಯ ಭವನಗಳು ಮಂಜೂರಾ ಗಿದ್ದರೂ ಸಹ ಕೆಲವು ಕಡೆಗಳಲ್ಲಿ ಭವನಗಳ ನಿರ್ಮಾಣವಾಗಿಲ್ಲ ಎಂದು ಕಬ್ಬಾರ್ ಆರೋಪಿಸಿದ್ದಾರೆ.

ರಾಜ್ಯದಲ್ಲಿ ಹೆಚ್ಚು ಆದಾಯ ಅಂದರೆ ಕಂದಾಯ ತಂದುಕೊಡುವಲ್ಲಿ ಎರಡನೇ ಸ್ಥಾನದಲ್ಲಿರುವ ವಾಣಿಜ್ಯ ನಗರ, ಉತ್ತರ ಕರ್ನಾಟಕ ಹೆಬ್ಬಾಗಿಲು ರಾಣೇಬೆನ್ನೂರು ನಗರ ಹಾಗೂ ಗ್ರಾಮೀಣ ಅಭಿವೃದ್ಧಿ ಮಾತ್ರ ಸೊನ್ನೆ. ಶಾಸಕರು ಈ ಬಗ್ಗೆ ತನಿಖೆ ನಡೆಸಿ ಅಭಿವೃದ್ಧಿಯ ಮಾಹಿತಿಯನ್ನು ಜನತೆಗೆ ತಿಳಿಸಬೇಕು ಎಂದು ಮನವಿ ಮಾಡಿರುವ ಹನುಮಂತಪ್ಪ ಅವರು, ತಪ್ಪಿದಲ್ಲಿ ದಾಖಲೆ ಸಮೇತವಿರುವ ಭ್ರಷ್ಟಾಚಾರವೂ ಸೇರಿದಂತೆ ನಿಮ್ಮ ವಿರುದ್ದ ಕಾನೂನು ಹೋರಾಟ ಮಾಡಲಾಗು ವುದು ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ಘಟಿಕೋತ್ಸವ ಪದವಿ ಪ್ರಮಾಣ ಪತ್ರ : ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ದಾವಣಗೆರೆ ಜ.17 - ದಾವಣಗೆರೆ ವಿಶ್ವವಿದ್ಯಾನಿಲಯದ 9 ನೇ ಘಟಿಕೋತ್ಸವದ ಪದವಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ ದಿನಾಂಕ 24 ರವರೆಗೆ ವಿಸ್ತರಿಸಲಾಗಿದೆ.

ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿಯಲ್ಲಿನ ಎನ್‌ಸಿಎಲ್ ರದ್ದುಪಡಿಕೊಳ್ಳಲು ಅಂತಿಮ ದಿನಾಂಕವನ್ನು ಇದೇ ದಿನಾಂಕ 20 ಕ್ಕೆ ನಿಗದಿಪಡಿಸಲಾಗಿದೆ. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ) ತಿಳಿಸಿದ್ದಾರೆ.


**ಭಾವಪೂರ್ಣ ಶ್ರದ್ಧಾಂಜಲಿ**




ಜಗಳೂರು ತಾಲ್ಲೂಕು ಜಂಗಮ ಸಮುದಾಯದ ಮುಖಂಡರೂ, ದಾವಣಗೆರೆ, ಚಿತ್ರದುರ್ಗ ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘದ ಮಾಜಿ ಅಧ್ಯಕ್ಷರೂ, ಜಗಳೂರಿನ ವಿಶ್ವನಾಥ್ ಮೆಡಿಕಲ್ ಸ್ಟೋರ್‌ನ ಮಾಲೀಕರೂ ಆದ
**ಶ್ರೀಯುತ ವೇದಮೂರ್ತಿ ಕೆ.ಎಂ. ವಿಶ್ವನಾಥ್**
ಅವರು ಇಂದು ಸಂಜೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯ ಸಂಸ್ಕಾರವನ್ನು ದಿನಾಂಕ 18.01.2022ರಂದು ಮಧ್ಯಾಹ್ನ ಜಗಳೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಶ್ರೀಯುತರ ನಿಧನಕ್ಕೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಜಗಳೂರು ತಾಲ್ಲೂಕು ಔಷಧಿ ವ್ಯಾಪಾರಿಗಳ ಸಂಘ
ಜಗಳೂರು, ದಾವಣಗೆರೆ ಜಿಲ್ಲೆ. ಮೊ: 96200 09108

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 17.1.2022ರಂದು ಸಂಜೆ ನಿಧನರಾದ ಜಗಳೂರಿನ ವಿಶ್ವನಾಥ್ ಮೆಡಿಕಲ್ ಸ್ಟೋರ್‌ನ ಮಾಲೀಕರು, ಚಿತ್ರದುರ್ಗ - ದಾವಣಗೆರೆ ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘದ ಮಾಜಿ ಅಧ್ಯಕ್ಷರೂ ಆದ
**ಶ್ರೀಯುತ ವೇದಮೂರ್ತಿ ಕೆ.ಎಂ. ವಿಶ್ವನಾಥ್**
ಅವರಿಗೆ ಭಾವ ಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಡಾ।। ಹೆಚ್.ಆರ್. ಶಂಕರಪ್ಪ, ಶ್ರೀಮತಿ ರತ್ನಮ್ಮ, ಜಗಳೂರು.
ಶಾಂತಪ್ಪ, ಶ್ರೀಮತಿ ಶೋಭಾ, ಶಾರದಾ ಲ್ಯಾಬ್
ಸಿಟಿ ಮೆಡಿಕಲ್ಸ್ ಸ್ಟೋರ್, ಸಿಟಿ ಹೈಟೆಕ್ ಲ್ಯಾಬ್
ಸಿಟಿ ಕ್ಲಿನಿಕ್ ಹಾಗೂ ಸಿಬ್ಬಂದಿ ವರ್ಗ, ಜಗಳೂರು


### ಶ್ರೀಮತಿ ಚೌಡಮ್ಮ ನಿಧನ



ಹರಿಹರ ನಗರದ ಎಕೆ ಕಾಲೋನಿ ನಿವಾಸಿ ದಿ॥ ರಾಮಪ್ಪ ಬಡಗೆಂಚಪ್ಪರ ಇವರ ಧರ್ಮಪತ್ನಿ ಶ್ರೀಮತಿ ಚೌಡಮ್ಮ ಇವರು ದಿನಾಂಕ 17.1.2022 ರ ಸೋಮವಾರ ಬೆಳಿಗ್ಗೆ10 ಗಂಟೆಗೆದೈವಾಧೀನರಾಗಿರುತ್ತಾರೆ. ಮೃತರ ಅಂತ್ಯಕ್ರಿಯೆಯನ್ನು 18.01.2022 ರ ಮಂಗಳವಾರ ಬೆಳಿಗ್ಗೆ 11 ಘಂಟೆಗೆ ನೆರವೇರಿಸಲಾಗುವುದು ಎಂದು ಹರಿಹರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ ತಿಳಿಸಿದ್ದಾರೆ.

### ಶಿರಮಗೊಂಡನಹಳ್ಳಿ ಪಂಚಪ್ಪ ನಿಧನ



ದಾವಣಗೆರೆ ತಾಲ್ಲೂಕು ಶಿರಮಗೊಂಡನಹಳ್ಳಿ ವಾಸಿ ತಗಡಿಮನೆ ಪಂಚಪ್ಪ (65) ಇವರು ದಿನಾಂಕ 17.1.2022ರ ಸೋಮವಾರ ಮಧ್ಯಾಹ್ನ 2.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.01.2022ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ತಾಲ್ಲೂಕು ಶಿರಮಗೊಂಡನಹಳ್ಳಿ ರುದ್ರಭೂಮಿಯಲ್ಲಿ ನೆರವೇರಲಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ನಿಟುವಳ್ಳಿ ಹಾಗು ನಿಟುವಳ್ಳಿ ಹೊಸಬಡಾವಣೆ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, 60 ಅಡಿ ರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಸೈಕಲ್‌ಗೆ ಕಾರು ಡಿಕ್ಕಿ: ಸವಾರನಿಗೆ ಗಾಯ

ದಾವಣಗೆರೆ, ಜ.17- ನಗರದ ಡೆಂಟಲ್ ಕಾಲೇಜು ಬಳಿಯ ಬಾಲಕರ ವಸತಿ ನಿಲಯದ ಬಳಿ ಕಾರೊಂದು ಸೈಕಲ್ ಸವಾರನಿಗೆ ಡಿಕ್ಕಿ ಹೊಡೆದ ಘಟನೆ ಭಾನುವಾರ ರಾತ್ರಿ 10.15ರ ವೇಳೆಗೆ ನಡೆದಿದೆ. ಸೈಕಲ್ ಮುಂಭಾಗ ಜಖಂಗೊಂಡಿದ್ದು, ಸವಾರ ಗಾಯಗೊಂಡಿದ್ದಾನೆ.

ಸ್ಥಳದಲ್ಲಿದ್ದ ಸಾರ್ವಜನಿಕರು ಸೈಕಲ್ ಸವಾರನ ಸಹಾಯಕ್ಕೆ ಧಾವಿಸಿ ಪ್ರಥಮ ಚಿಕಿತ್ಸೆ ಕೊಡಿಸಿದ್ದಾರೆ. ಈ ವೇಳೆ ಕಾರಿನ ಚಾಲಕ ಅಪಘಾತ ಮಾಡಿ ಸೌಜನ್ಯದಿಂದ ವರ್ತಿಸದೆ 200 ರೂ.ಗಳನ್ನು ನೀಡಿ ತೆರಳಿರುವುದಾಗಿ ಸೈಕಲ್ ಸವಾರ ಸ್ಥಳೀಯರಿಗೆ ವಿವರಿಸಿದ್ದಾನೆ.

ಹಣದ ದರ್ಪದಿಂದ ಮಾನವೀಯತೆ ಮರೆತ ಕಾರಿನ ಚಾಲಕನನ್ನು ಪತ್ತೆ ಹಚ್ಚಿ, ಪೊಲೀಸರು ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

# ಭರಮಸಾಗರ - ಜಗಳೂರು ಏತ ನೀರಾವರಿ ಯೋಜನೆಗಳು ಅವಳಿ-ಜವಳಿ ಮಕ್ಕಳಿದ್ದಂತೆ

ಭರಮಸಾಗರ, ಜ.17- ಇಲ್ಲಿಯ ಬಿಚ್ಚುಗತ್ತಿ ಭರಮಣ್ಣ ನಾಯಕನ ಕೆರೆ ಕೋಡಿ ಬಿದ್ದ ನೀರು ಜಗಳೂರು ತಾಲ್ಲೂಕಿನ ತುಪ್ಪದಹಳ್ಳಿ ಕೆರೆ ತಲುಪಿದೆ. ಹರಿವ ನೀರು ನೋಡಿ ಜನರ ಮುಖದಲ್ಲಿ ಸಂತೋಷದ ಕೋಡಿಯೇ ಹರಿಯುತ್ತಿದೆ. ಭರಮಸಾಗರ ಮತ್ತು ಜಗಳೂರು ಏತ ನೀರಾವರಿ ಯೋಜನೆಗಳು ಅವಳಿ-ಜವಳಿ ಮಕ್ಕಳಿದ್ದಂತೆ ಎಂದು ಸಿರಿಗೆರೆಯ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಬಣ್ಣಿಸಿದರು.

ಭರಮಸಾಗರದ ದೊಡ್ಡಕೆರೆಯಲ್ಲಿ ಗಂಗಾಪೂಜೆ ನೆರವೇರಿಸಿದ ನಂತರ ವೇದಿಕೆ ಕಾರ್ಯಕ್ರಮದಲ್ಲಿ ಶ್ರೀಗಳು ಮಾತನಾಡಿದರು.

ಜಗಳೂರಿನಲ್ಲಿ ನಡೆದ ತರಳಬಾಳು ಹುಣ್ಣಿಮೆಯಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮುಂದೆ ಪ್ರಸ್ತಾಪ ಮಾಡಿದಾಗ ಬಜೆಟ್‌ನಲ್ಲಿ 500 ಕೋಟಿ ಹಣವನ್ನು ಮೀಸಲಿಟ್ಟರು. ಎಚ್.ಡಿ.ಕುಮಾರಸ್ವಾಮಿ ಸಿಎಂ ಆಗಿದ್ದಾಗ ನೀರಾವರಿ ನಿಗಮದ ಅಡಿ ಈ ಯೋಜನೆಯನ್ನು ಆದ್ಯತೆಯ ಮೇಲೆ ಅಂಗೀಕರಿಸಿದರು. ನಂತರದ ಮುಖ್ಯಮಂತ್ರಿ ಬಿ. ಎಸ್.ಯಡಿಯೂರಪ್ಪನವರ ಆರ್ಥಿಕ ಸಹಕಾರದಿಂದ ಜಗಳೂರು ಮತ್ತು ಭರಮಸಾಗರ ಜೋಡಿ ಏತ ನೀರಾವರಿ ಯೋಜನೆ ಸಫಲವಾಯಿತು.

ರೈತರು ಎಂದಿಗೂ ಸೋಮಾರಿಗಳಲ್ಲ. ರೈತರಿಗೆ ನೀರು ಕೊಟ್ಟರೆ ಸರ್ಕಾರದ ಸಾಲವನ್ನು ತೀರಿಸುವಷ್ಟು ಸಾಮರ್ಥ್ಯವಿದೆ ಎಂದು ತರಳಬಾಳು ಶ್ರೀಗಳು ಹೆಮ್ಮೆಯಿಂದ ಹೇಳಿದರು.



ಜಗಳೂರು ಏತ ನೀರಾವರಿ ಯೋಜನೆ ಇಷ್ಟೊತ್ತಿಗಾಗಲೇ ಯಶಸ್ವಿಯಾಗಿ ಮುಗಿಯಬೇಕಿತ್ತು. ಆದರೆ, ಕಕ್ಕರಗೊಳ್ಳ ಸಮೀಪ 800 ಮೀಟರ್ ಪೈಪ್ ಅಳವಡಿಸಲು ಕೆಲ ರೈತರು ಅಡ್ಡಿಪಡಿಸಿ, 6 ಕೋಟಿ ರೂ. ಪರಿಹಾರ ಕೇಳುತ್ತಿದ್ದಾರೆ. ಮನುಷ್ಯರ ಸ್ವಾರ್ಥಕ್ಕೆ ಕೊನೆಯೇ ಇಲ್ಲವಾಗಿದೆ. ಒಂದು ವೇಳೆ ಬಿಚ್ಚುಗತ್ತಿ ಭರಮಣ್ಣ ನಾಯಕರು ಕೆರೆ ಕಟ್ಟಿಸದಿದ್ದರೆ ನಾವು ನೀರು ತುಂಬಿಸಲು ಸಾಧ್ಯವಾಗುತ್ತಿರಲಿಲ್ಲ. ಇದನ್ನು ನಾವೆಲ್ಲ ಅರ್ಥಮಾಡಿಕೊಳ್ಳಬೇಕು. ಅವರನ್ನು ಎಷ್ಟು ನೆನೆಸಿದರೂ ಸಾಲದು ಎಂದರು.

ಜಗಳೂರು ಕ್ಷೇತ್ರದ ಮಾಜಿ ಶಾಸಕ ಎಚ್.ಪಿ. ರಾಜೇಶ್ ಮಾತನಾಡಿ, ಭರಮಸಾಗರ ಜಗಳೂರು ಏತ ನೀರಾವರಿ ಯೋಜನೆ ಯಶಸ್ವಿಯಾಗಿದೆ. ಇದಕ್ಕೆ ಶ್ರೀಗಳ ಸಂಕಲ್ಪ ಕಾರಣ. ರಾಜಕಾರಣಿಗಳ ಸೇವೆ ಅಳಿಲು ಸೇವೆ ಮಾತ್ರ. ಎರಡು ಯೋಜನೆಗಳು ಎಂಬ ಮಕ್ಕಳನ್ನು ಕರುಣಿಸಿರುವ ಶ್ರೀಗಳಿಗೆ ಆಭಾರಿಯಾಗಿರುತ್ತೇವೆ ಎಂದರು.

ಜಿ.ಪಂ ಮಾಜಿ ಉಪಾಧ್ಯಕ್ಷ ಎಚ್.ಎನ್. ತಿಪ್ಪೇಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಾವಿರ ಅಡಿ ಕೊರೆಸಿದರೂ ನೀರು ಬರದ ಜಮೀನಿನಲ್ಲಿ ಪ್ರಸ್ತುತ 80 ಅಡಿಗೆ ನೀರು ಬರುತ್ತಿದ್ದು, ಇದಕ್ಕೆ ಕೆರೆ ತುಂಬಿರುವುದೇ ಕಾರಣ. ಈ ಭಾಗದ ಜನ ವಲಸೆ ಹೋಗುವುದನ್ನು ನಿಲ್ಲಿಸಿ, ಕೃಷಿಯ ಕಡೆ ಹೆಚ್ಚು ಗಮನಹರಿಸಲಿದ್ದಾರೆ. ಯಾವ ರಾಜಕಾರಣಿಗಳೂ ಮಾಡದ ಕೆಲಸವನ್ನು ಶ್ರೀಗಳು ಮಾಡಿದ್ದಾರೆ ಎಂದು ಹೇಳಿದರು.

ಭರಮಸಾಗರ ಕೆರೆ ಸಮಿತಿ ಅಧ್ಯಕ್ಷ ಶಶಿಪಾಟೀಲ್, ವೀಣಾ ಶಿವಯೋಗಿ, ಚಿಕ್ಕಬೆನ್ನೂರು ತೀರ್ಥಪ್ಪ ಮಾತನಾಡಿದರು. ಜಿ.ಪಂ ಮಾಜಿ ಸದಸ್ಯ ಡಿ.ವಿ.ಶರಣಪ್ಪ, ಡಿ.ಎಸ್.ಪ್ರವೀಣ್‌ಕುಮಾರ್, ಬಣಜಿಗ ಸಂಘದ ಅಧ್ಯಕ್ಷ ಬಿ.ಬಸವರಾಜಪ್ಪ, ಟಿ.ಆರ್.ಚನ್ನೇಶ್, ಕೋಡಿರಂಗವ್ವನಹಳ್ಳಿ ಹನುಮಂತಪ್ಪ, ಮಾಜಿ ತಾ.ಪಂ. ಸದಸ್ಯ ಕಲ್ಲೇಶ್, ಕೋಗುಂಡೆ ಮಂಜುನಾಥಪ್ಪ, ಶೈಲೇಶ್ ಕುಮಾರ್, ವೀರೇಶ್, ಶ್ರೀಧರ್ ಸೇರಿದಂತೆ ಅನೇಕ ಮುಖಂಡರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಭರಮಸಾಗರ ಗ್ರಾಮಸ್ಥರು ಶ್ರೀಗಳವರಿಗೆ ಶಾಲು ಹೊದಿಸಿ, ಕಾಣಿಕೆ ನೀಡಿ ಗೌರವ ಸಮರ್ಪಣೆ ಮಾಡಿದರು. ಬಿ.ಟಿ. ನಿರಂಜನ ಮೂರ್ತಿ ಸ್ವಾಗತಿಸಿದರು.

## ಜಿಲ್ಲೆಯ 1300 ವಿದ್ಯಾರ್ಥಿಗಳಿಗೆ ಸುಜ್ಞಾನ ನಿಧಿ ಶಿಷ್ಯವೇತನ ವಿತರಣೆ



ಮಲೇಬೆನ್ನೂರು, ಜ. 17 - ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾ ಕಚೇರಿ ವ್ಯಾಪ್ತಿಯ ಬಡ ವಿದ್ಯಾರ್ಥಿಗಳಿಗೆ ನೆರವಾಗಲೆಂದು ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಇದುವರೆಗೆ 40 ಸಾವಿರ ವಿದ್ಯಾರ್ಥಿಗಳಿಗೆ ಒಟ್ಟು 50 ಕೋಟಿ ರೂ. ಶಿಷ್ಯ ವೇತನ ನೀಡಿದ್ದು, ದಾವಣಗೆರೆ ಜಿಲ್ಲೆಯಲ್ಲಿ 1300 ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡಿದ್ದಾರೆ ಎಂದು ಯೋಜನೆಯ ಜಿಲ್ಲಾ ಹಿರಿಯ ನಿರ್ದೇಶಕ ಜಯಂತ್ ಪೂಜಾರಿ ತಿಳಿಸಿದ್ದಾರೆ.

ಇಲ್ಲಿನ ಯೋಜನಾ ಕಚೇರಿಯಲ್ಲಿ ನಡೆದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಸಮುದಾಯ ಅಭಿವೃದ್ಧಿ ವಿಭಾಗದ ಮೂಲಕ ಸುಜ್ಞಾನ ನಿಧಿ ಶಿಷ್ಯವೇತನ ಸದ್ಬಳಕೆ ಮಾಡಿಕೊಳ್ಳಿ ಎಂದರು.

ಸಬ್‌ಇನ್ಸ್ ಪೆಕ್ಟರ್ ರವಿಕುಮಾರ್ ಮಾತನಾಡಿ, ಸುಜ್ಞಾನ ನಿಧಿ ಪಡೆಯುವ ವಿದ್ಯಾರ್ಥಿಗಳು ಸನ್ಮಾರ್ಗದಲ್ಲಿ ನಡೆದು, ಓದಿನ ಕಡೆಗೆ ಹೆಚ್ಚಿನ ಗಮನ ನೀಡಿ, ಆದರ್ಶ ವಿದ್ಯಾರ್ಥಿಯಾಗಿ ಸಮಾಜದ ಶಕ್ತಿಯಾಗಿ ಹೊರಹೊಮ್ಮಬೇಕು ಎಂದು ತಿಳಿಸಿದರು.

ಪುರಸಭೆಯ ಮುಖ್ಯಾಧಿಕಾರಿ ಡೊಂಬರ್ ಮಾತನಾಡಿ, ಸುಜ್ಞಾನ ನಿಧಿ ಶಿಷ್ಯ ವೇತನವನ್ನು ಪ್ರತಿಯೊಬ್ಬ ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಿ ಎಂದರು. ಯೋಜನಾಧಿಕಾರಿ ವಸಂತ್ ಎಸ್. ದೇವಾಡಿಗ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಲೇಬೆನ್ನೂರು ವಲಯದ ಮೇಲ್ವಿಚಾರಕ ಸಂತೋಷ್ ಕಾರ್ಯಕ್ರಮ ನಿರೂಪಿಸಿದರು. ಕಚೇರಿ ಪ್ರಬಂಧಕರಾದ ಆಶಾ, ರಾಕೇಶ್ ಹಾಗೂ ಎಲ್ಲಾ ಸಿಬ್ಬಂದಿಗಳು ಹಾಜರಿದ್ದರು.

## ಹರಪನಹಳ್ಳಿ : ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷರಾಗಿ ಧನಲಕ್ಷ್ಮಿ



ಹರಪನಹಳ್ಳಿ, ಜ. 17- ವಿಜಯನಗರ ಜಿಲ್ಲಾ ಬಿಜೆಪಿ ಎಸ್ಸಿ ಮೋರ್ಚಾ ಉಪಾಧ್ಯಕ್ಷರಾಗಿ ಬಿ.ಧನಲಕ್ಷ್ಮಿ ನೇಮಕವಾಗಿದ್ದಾರೆ ಎಂದು ಜಿಲ್ಲಾಧ್ಯಕ್ಷ ಕೆ.ಎಚ್.ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

## ಹೋಟೆಲ್, ರೆಸಾರ್ಟ್‌ಗಳಿಗೆ ಆಸ್ತಿ ತೆರಿಗೆ ಪಾವತಿಗೆ ರಿಯಾಯಿತಿ

ದಾವಣಗೆರೆ ಜ. 17 - ಕೋವಿಡ್-19 ಸಾಂಕ್ರಾಮಿಕ ಸೋಂಕು ಹಿನ್ನೆಲೆಯಲ್ಲಿ 2021-22ನೇ ಸಾಲಿನ ಹಣಕಾಸು ವರ್ಷದಲ್ಲಿ ದಾವಣಗೆರೆ ಜಿಲ್ಲಾ ವ್ಯಾಪ್ತಿಯ ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನೋರಂಜನಾ ಪಾರ್ಕ್ ಗಳಿಗೆ ಆಸ್ತಿ ತೆರಿಗೆ ಪಾವತಿಯಲ್ಲಿ ಶೇ. 50 ರಷ್ಟು ರಿಯಾಯಿತಿ ಹಾಗೂ 3 ತಿಂಗಳ ವಿದ್ಯುಚ್ಛಕ್ತಿ ಡಿಮ್ಯಾಂಡ್/ ಫಿಕ್ಸೆಡ್ ಡೆಪಾಸಿಟ್ ಮನ್ನಾ ಸೌಲಭ್ಯವನ್ನು ಸರ್ಕಾರದಿಂದ ಘೋಷಿಸಲಾಗಿದ್ದು, ಸೌಲಭ್ಯ ಪಡೆಯಲು ನೋಂದಣಿ ಮಾಡಿಕೊಳ್ಳುವಂತೆ ಪ್ರವಾಸೋದ್ಯಮ ಇಲಾಖೆ ಸೂಚನೆ ನೀಡಿದೆ.

ಸರ್ಕಾರ ಘೋಷಿಸಿರುವ ರಿಯಾಯಿತಿ ಸೌಲಭ್ಯ ಪಡೆಯಲು, ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಂದ ಪರವಾನಗಿ ಪಡೆದಿರುವ ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನೋರಂಜನಾ ಪಾರ್ಕ್‌ಗಳ ಉದ್ದಿಮೆದಾರರು, ಟೂರ್ಸ್ ಅಂಡ್ ಟ್ರಾವೆಲ್ಸ್ ಆಪರೇಟರ್ಸ್, ಕೆಟಿಟಿಎಫ್ (ಕರ್ನಾಟಕ ಟೂರಿಸಂ ಟ್ರೇಡ್ ಫೆಸಿಲಿಟೇಶನ್) ಆಕ್ಟ್ ನ ಪ್ರಕರಣ ಸಂಖ್ಯೆ 8/1 ಅನ್ವಯ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ವೆಬ್‌ಸೈಟ್ https://kttf. karnatakatourism.org ನಲ್ಲಿ ಕಡ್ಡಾಯವಾಗಿ ನೋಂದಾಯಿಸಿ ಪ್ರಮಾಣ ಪತ್ರವನ್ನು ಪಡೆಯಬೇಕಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ರೈಲ್ವೆ ನಿಲ್ದಾಣ ಪಕ್ಕ, ಉಪವಿಭಾಗಾಧಿಕಾರಿಗಳ ಕಚೇರಿ ಆವರಣ, ದಾವಣಗೆರೆ, ದೂರವಾಣಿ ಸಂಖ್ಯೆ; 08192-230123 ಕ್ಕೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದೆ.

## ಆವರಗೊಳ್ಳದಲ್ಲಿ ಸ್ವಚ್ಛ ಸಂಕಿರಣ ಕಾರ್ಯಕ್ರಮ



ದಾವಣಗೆರೆ, ಜ.17 - ಆವರಗೊಳ್ಳ ಗ್ರಾಮ ಪಂಚಾಯತ್ ವತಿಯಿಂದ ಸ್ವಚ್ಛ ಸಂಕಿರಣ ಕಾರ್ಯಕ್ರಮವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಪಂಚಾಯತಿ ಅಧ್ಯಕ್ಷ ಜಿ.ಟಿ. ವೀರಣ್ಣ ಉದ್ಘಾಟಿಸಿದರು.

ಗ್ರಾಮದ ಹಿರಿಯ ಮುಖಂಡರಾದ ಬಿ. ಎಂ. ಷಣ್ಮುಖಯ್ಯ, ಖಲೀಲ್‌ಸಾಬ್, ಬಿಜೆಪಿ ಮುಖಂಡ ಎಸ್. ವೀರಯ್ಯ, ಪಿಡಿಓ ಮಂಜುನಾಥ್ ಮತ್ತು ಇತರರು ಉಪಸ್ಥಿತರಿದ್ದರು. ಪಂಚಾಯತಿ ಉಪಾಧ್ಯಕ್ಷರಾದ ಇಮಾಮ್‌ಬಿ ಅವರು ಕಸ ವಿಲೇವಾರಿ ವಾಹನವನ್ನು ಇದೇ ಸಂದರ್ಭದಲ್ಲಿ ಉದ್ಘಾಟಿಸಿದರು.

## ದಾವಣಗೆರೆ ಚಿತ್ರಸಂತೆಗೆ ಅರ್ಜಿ ಆಹ್ವಾನ

ದಾವಣಗೆರೆ, ಜ.17- ಇದೇ ದಿನಾಂಕ 30 ರಂದು ಉದ್ಯಮ ನಗರಿ ದಾವಣಗೆರೆಯಲ್ಲಿ ನಡೆಯಲಿರುವ ಬೃಹತ್ ಚಿತ್ರಸಂತೆಯಲ್ಲಿ ಭಾಗವಹಿಸುವಂತೆ ರಾಜ್ಯ, ಹೊರ ರಾಜ್ಯದ ಚಿತ್ರ ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗಿದೆ. ಭಾಗವಹಿಸುವ ಕಲಾವಿದರಿಗೆ ಪೇಂಟಿಂಗ್ ಹಿರಿಯ ಹಾಗೂ ವಿದ್ಯಾರ್ಥಿ ವಿಭಾಗದಲ್ಲಿ ಅಲ್ಲದೇ ಅತ್ಯುತ್ತಮ ಸ್ಟಾಲ್‌ಗಳನ್ನೂ ಗುರುತಿಸಲಾಗುವುದು.

ಆಸಕ್ತರು ಜನವರಿ 20ರ ಒಳಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ Davanager Chitra Santhe ಫೇಸ್ ಬುಕ್ ಖಾತೆಯಲ್ಲಿ ಲಭ್ಯವಿದ್ದು, ಮಾಹಿತಿಗಾಗಿ 98442 62279, 63614 12273 ಸಂಪರ್ಕಿಸಬಹುದು ಎಂದು ಪರಿಷತ್ ಕಾರ್ಯದರ್ಶಿ ಡಿ. ಶೇಷಾಚಲ ತಿಳಿಸಿದ್ದಾರೆ.

## ಡಾ. ಅಂಬೇಡ್ಕರ್ ಪುತ್ಥಳಿ ನವೀಕರಣದ ಕಾಮಗಾರಿ ಪರಿಶೀಲಿಸಿದ ಮೇಯರ್



ದಾವಣಗೆರೆ,ಜ.17- ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿನ ಡಾ. ಬಿ.ಆರ್.ಅಂಬೇಡ್ಕರ್ ಪುತ್ಥಳಿಯ ನವೀಕರಣದ ಕಾಮಗಾರಿಯನ್ನು ನಗರ ಪಾಲಿಕೆ ಮಹಾಪೌರ ಎಸ್.ಟಿ.ವೀರೇಶ್ ಅವರು ಪರಿಶೀಲಿಸಿದರು. ಕೆಟಿಜೆ ನಗರದ ಗಾಂಧೀಜಿ ಹರಿಜನ ಯುವಕ ಸಂಘದ ಕಾರ್ಯದರ್ಶಿ ಸೋಮಲಾಪುರ ಹನುಮಂತಪ್ಪ, ಬಿಜೆಪಿ ಮುಖಂಡರಾದ ಮಂಜುನಾಥ, ಹಾಲೇಶ್, ಬಿಡಿಎಸ್‌ಎಸ್ ಆವರಗೆರೆ ಸಿದ್ದೇಶ್, ಬಸಾಪುರದ ತಿಪ್ಪೇಶ್ ಮತ್ತಿತರರಿದ್ದರು.

## ರಾಣೇಬೆನ್ನೂರು ಗ್ರಾಮೀಣದಲ್ಲಿ ವಿದ್ಯುತ್ ಇಲ್ಲ

ಎಫ್-03 ನೂಕಾಪುರ ಐ.ಪಿ, ಎಫ್-04 ಚೌಡಯ್ಯದಾನಾಪುರ ಐ.ಪಿ, ಎಫ್-05 ಹೊನ್ನತ್ತಿ ಎನ್.ಜೆ.ವೈ (ಕೆರೆಮಲ್ಲಾಪುರ, ಹಳೇ ಹೊನ್ನತ್ತಿ, ಹೊಸ ಹೊನ್ನತ್ತಿ, ಗುಡಿ ಹೊನ್ನತ್ತಿ, ಹನುಮಾಪುರ, ಮಾದುರಾಯನಪುರ, ವೈ.ಟಿ.ಹೊನ್ನತ್ತಿ ಮತ್ತು ನೂಕಾಪುರ ಗ್ರಾಮಗಳಿಗೆ) ಮತ್ತು ಎಫ್-06 ಹನುಮಾಪುರ ಐ.ಪಿ ಮಾರ್ಗಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ವರೆಗೆ ವಿದ್ಯುತ್ ವಿತರಣೆ ಇರುವುದಿಲ್ಲ .

## ದಾವಣಗೆರೆ ತಾ.ನಲ್ಲಿ 2ನೇ ಡೋಸ್, ಬೂಸ್ಟರ್ ಡೋಸ್

ದಾವಣಗೆರೆ ಜ. 17 - ಕೋವಿಡ್ 3ನೇ ಅಲೆ ತಡೆಗಟ್ಟುವ ನಿಟ್ಟಿನಲ್ಲಿ ಇದುವರೆಗೂ ಎರಡನೇ ಡೋಸ್ ಲಸಿಕೆ ಪಡೆಯುವುದು ಬಾಕಿ ಇರುವವರು ಹಾಗೂ 2ನೇ ಡೋಸ್ ಪಡೆದು 9 ತಿಂಗಳು ಪೂರ್ಣಗೊಂಡಿರುವ ಮುಂಚೂಣಿ ಕಾರ್ಯಕರ್ತರು ಮತ್ತು 60 ವರ್ಷ ಮೇಲ್ಪಟ್ಟವರು ಬೂಸ್ಟರ್ ಡೋಸ್ ಲಸಿಕೆಯನ್ನು ಕೂಡಲೇ ಹತ್ತಿರದ ಆರೋಗ್ಯ ಕೇಂದ್ರಗಳಲ್ಲಿ ಪಡೆದುಕೊಳ್ಳುವಂತೆ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಎಲ್.ಡಿ. ವೆಂಕಟೇಶ್ ಮನವಿ ಮಾಡಿದ್ದಾರೆ.

ತಾಲ್ಲೂಕಿನಲ್ಲಿ ನಾಳೆ ದಿನಾಂಕ 18 ರ ಲಸಿಕೆ ಕಾರ್ಯಕ್ರಮಕ್ಕಾಗಿ ಚಿಗಟೇರಿ ಜಿಲ್ಲಾ ಆಸ್ಪತ್ರೆಯೂ ಸೇರಿದಂತೆ ಎಲ್ಲ ನಗರ ಆರೋಗ್ಯ ಕೇಂದ್ರಗಳಿಗೆ ಒಟ್ಟು 7500 ಡೋಸ್ ಕೋವಿಶೀಲ್ಡ್ ಮತ್ತು 3500 ಡೋಸ್ ಕೋವ್ಯಾಕ್ಸಿನ್ ಹಾಗೂ ಗ್ರಾಮೀಣ ಪ್ರದೇಶಗಳಿಗೆ 7500 ಡೋಸ್ ಕೋವಿಶೀಲ್ಡ್ ಲಸಿಕೆ ಹಂಚಿಕೆ ಮಾಡಲಾಗಿದೆ ಎಂದವರು ಹೇಳಿದ್ದಾರೆ.

## ರಾಣೇಬೆನ್ನೂರಿನಲ್ಲಿ ಸಂಕ್ರಾಂತಿ ಸಂಭ್ರಮ



ರಾಣೇಬೆನ್ನೂರಿನಲ್ಲಿ ಶನಿವಾರ ನಡೆದ ಸಂಕ್ರಾಂತಿ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಂಡ ಕೆಲವೇ ಜನ ಬಂಧು-ಬಾಂಧವರು ಒಟ್ಟಿಗೆ ಕುಳಿತು ಊಟ ಮಾಡಿದರು.

## ವಿದ್ಯಾರ್ಥಿ ವೇತನ, ಹಾಸ್ಟೆಲ್ ಸೌಲಭ್ಯಕ್ಕೆ ಆಗ್ರಹ

### ಜಗಳೂರಿನಲ್ಲಿ ಎಸ್‌ಎಫ್‌ಐ ಪ್ರತಿಭಟನೆ




ಜಗಳೂರು, ಜ.17- ಬಿ.ಇಡಿ ಹಾಗೂ ಪ್ಯಾರಾಮೆಡಿಕಲ್ ಖಾಸಗಿ ವಿದ್ಯಾರ್ಥಿಗಳಿಗೆ ಸರ್ಕಾರ ವಿದ್ಯಾರ್ಥಿ ವೇತನ ಹಾಗೂ ಹಾಸ್ಟೆಲ್ ನೀಡದಿರುವುದನ್ನು ವಿರೋಧಿಸಿ, ಇಂದು ಪಟ್ಟಣದಲ್ಲಿ ಎಸ್‌ಎಫ್‌ಐ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾ ಸಂಚಾಲಕ ಅನಂತ ರಾಜ್ ಮಾತನಾಡಿ, ಬಿ.ಇಡಿ ಹಾಗೂ ಪ್ಯಾರಾ ಮೆಡಿಕಲ್‌ಗೆ ಸರ್ಕಾರಿ ಕೋಟಾದಲ್ಲಿ ಕಾಲೇಜಿನಲ್ಲಿ ಅವಕಾಶ ಸಿಗದೆ ಖಾಸಗಿ ಕೋಟಾದಲ್ಲಿ ಕಾಲೇಜಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಸರ್ಕಾರ ವಿದ್ಯಾರ್ಥಿ ವೇತನವನ್ನು ನಿಲ್ಲಿಸಿರುವುದು ದುರಂತ ಎಂದರು.

ಖಾಸಗಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಬರುವುದಿಲ್ಲ ಎಂಬುವ ನೆಪವನ್ನು ಇಟ್ಟುಕೊಂಡು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯವನ್ನು ಕೊಡುತ್ತಿಲ್ಲ. ದೂರ ದೂರಿನಿಂದ ಪಟ್ಟಣಕ್ಕೆ ಬಂದು ಶಿಕ್ಷಣ ಕಲಿಯುವ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆ ಆಗುತ್ತಿದೆ. ಸರ್ಕಾರ ಈ ಕೂಡಲೇ ತನ್ನ ನೀತಿಯನ್ನು ಕೈಬಿಟ್ಟು ವಿದ್ಯಾರ್ಥಿಗಳ ಹಿತವನ್ನು ಕಾಪಾಡಬೇಕು ಎಂದು ಆಗ್ರಹಿಸಿದರು.

ಮಹಾಲಿಂಗಪ್ಪ ಜೆ.ಹೆಚ್.ಎಂ. ಹೊಳೆ ಮಾತನಾಡಿ, ಪ್ರಸುತ್ತ ಕೊರೊನಾ ಮಾರಕ ರೋಗ ಇಡೀ ವಿಶ್ವವನ್ನೇ ತಲ್ಲಣಗೊಳಿಸಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಉನ್ನತ ಶಿಕ್ಷಣಕ್ಕೆ ಪ್ರವೇಶವನ್ನು ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ತುಂಬಾ ಇಳಿಮುಖವಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಸರ್ಕಾರಗಳ ವಿದ್ಯಾರ್ಥಿ ವಿರೋಧಿ ನೀತಿಗಳು. ಆದರಿಂದ ಸರ್ಕಾರಗಳು ಎಚ್ಚೆತ್ತುಕೊಂಡು ವಿದ್ಯಾರ್ಥಿ ವೇತನವನ್ನು ಪ್ರಾರಂಭ ಮಾಡಬೇಕು ಮತ್ತು ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯವನ್ನು ಒದಗಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಇಫ್ತಿಕಾರ್ ಅಹಮದ್, ಎಸ್‌ಎಫ್‌ಐ ಸಹ ಸಂಚಾಲಕ ನಾಗರಾಜ್ ಎಸ್., ಪಿ.ಕಾಟಲಿಂಗಪ್ಪ, ವಿದ್ಯಾರ್ಥಿಗಳಾದ ಸಮ್ರಿನ್, ನಯನ, ಮಾನಸ, ಸುಪ್ರಿಯಾ, ಜ್ಯೋತಿ ಕುಮಾರ್, ಲಿಂಗರಾಜಪ್ಪ ಮತ್ತಿತರರಿದ್ದರು.

## ಸಾಸ್ವೆಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ ತಾ. ಸಾಸ್ವೆಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಲಿಲೋ ಕಾಮಗಾರಿ ಕಾರ್ಯವನ್ನು ಬೃಹತ್ ಕಾಮಗಾರಿ ವಿಭಾಗ ಕ.ವಿ.ಪ್ರ.ನಿ.ನಿ ಇವರು ಹಮ್ಮಿಕೊಂಡಿರುವುದರಿಂದ 66/11 ಕೆವಿ ಸಾಸ್ವೆಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಹಳ್ಳಿಗಳಿಗೆ ಇಂದು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಹೊನ್ನಾಳಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿ) ರವಿಕಿರಣ್ ತಿಳಿಸಿದ್ದಾರೆ.

## ಸ್ವಾಮಿ ವಿವೇಕಾನಂದ ರೆಸಿಡೆನ್ಶಿಯಲ್ ಸ್ಕೂಲ್‌ನಲ್ಲಿ ವಿವೇಕಾನಂದರ ಜಯಂತಿ



ದಾವಣಗೆರೆ, ಜ. 17- ನಗರದ ವಿಶ್ವಬಂಧು ಅಭಿವೃದ್ಧಿ ಪ್ರತಿಷ್ಠಾನದ ಆಶ್ರಯದಲ್ಲಿ ನಡೆಯುತ್ತಿರುವ ಸ್ವಾಮಿ ವಿವೇಕಾನಂದ ರೆಸಿಡೆನ್ಶಿಯಲ್ ಶಾಲೆಯಲ್ಲಿ ವಿವೇಕಾನಂದ ಜಯಂತಿ ಆಚರಿಸಲಾಯಿತು. ಶಾಲೆಯ ಗೌರವ ಕಾರ್ಯದರ್ಶಿ ಎಸ್. ಮರುಳಸಿದ್ಧಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮುಖ್ಯ ಶಿಕ್ಷಕಿ ಎಂ. ಜಯಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

## ಎರಡು ಕಳ್ಳತನ ಪ್ರಕರಣಗಳು ಪತ್ತೆ

### ಓರ್ವನ ಬಂಧನ : ಒಂದೂವರೆ ಲಕ್ಷ ಮೌಲ್ಯದ ಚಿನ್ನಾಭರಣ ವಶ

ದಾವಣಗೆರೆ, ಜ.17- ಎರಡು ಕಳ್ಳತನ ಪ್ರಕರಣಗಳನ್ನು ಪತ್ತೆ ಮಾಡಿರುವ ಆಜಾದ್ ನಗರ ಪೊಲೀಸರು, ಓರ್ವನ ಬಂಧಿಸಿ, 1 ಲಕ್ಷದ 50 ಸಾವಿರ ರೂ. ಮೌಲ್ಯದ ಬಂಗಾರ ಮತ್ತು ಬೆಳ್ಳಿಯ ಆಭರಣಗಳ ವಶಪಡಿಸಿಕೊಂಡಿದ್ದಾರೆ. ನಗರ ಉಪವಿಭಾಗದ ಪೊಲೀಸ್ ಉಪಾಧೀಕ್ಷಕ ನರಸಿಂಹ ತಾಮ್ರಧ್ವಜ ಮಾರ್ಗದರ್ಶನದಲ್ಲಿ ಆಜಾದ್ ನಗರ ವೃತ್ತದ ಸಿಪಿಐ ಕೆ.ಎನ್. ಗಜೇಂದ್ರಪ್ಪ ಮತ್ತು ಆಜಾದ್ ನಗರ ಪಿಎಸ್‌ಐ ರವೀಂದ್ರ ಕಾಳಭೈರವ ಹಾಗೂ ಸಿಬ್ಬಂದಿಗಳಾದ ನಿಜಲಿಂಗಪ್ಪ ತಳವಾರ, ನಾಗರಾಜ್, ಮಹಮ್ಮದ್ ಬಷೀರ್, ಮಡ್ಡಿ ಹನುಮಂತಪ್ಪ, ಸುಭಾಷ್ ಮತ್ತು ದಯಾನಂದ್ ಒಳಗೊಂಡ ತಂಡವು ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚಿದೆ.


ವಾಸವಿ ಯುವಜನ ಸಂಘ (ರಿ)
ಎಸ್.ಕೆ.ಪಿ. ರಸ್ತೆ, ದಾವಣಗೆರೆ
ಜನ್ಮದಿನದ ಶುಭಾಶಯಗಳು



ಶ್ರೀ ಬಿ.ಎಸ್. ಸೂರಜ್
ನಿರ್ದೇಶಕರು
ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ
ಕ್ರೀಡಾ ಹಾಗೂ ಆರೋಗ್ಯ ವಿಭಾಗ



ಮಾತೆ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರು ಅವರಿಗೆ ಆಯುರಾರೋಗ್ಯ-ಅಷ್ಟೈಶ್ವರ್ಯ-ಸುಖ-ಶಾಂತಿ - ನೆಮ್ಮದಿ ನೀಡಲಿ ಹಾಗೂ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಶಕ್ತಿ ನೀಡಲೆಂದು ಪ್ರಾರ್ಥಿಸುತ್ತಾ, ಶುಭ ಹಾರೈಸುತ್ತೇವೆ.
ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರು
ವಾಸವಿ ಯುವಜನ ಸಂಘ (ರಿ), ಎಸ್.ಕೆ.ಪಿ. ರಸ್ತೆ, ದಾವಣಗೆರೆ.
ಅವಸರವೇ ಅಪಘಾತಕ್ಕೆ ಕಾರಣ


## ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಿಂದ ವಿದ್ಯಾರ್ಥಿ ವೇತನ



ದಾವಣಗೆರೆ, ಜ.17- ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಇಂದು ಏರ್ಪಾಡಾಗಿದ್ದ ಸಮಾರಂಭದಲ್ಲಿ ವಿದ್ಯಾರ್ಥಿ ವೇತನ ನೀಡಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶಾಮನೂರು ಶಿವಶಂಕರಪ್ಪ ಮತ್ತು ಡಿಡಿಪಿಯು ಶಿವರಾಜ್ ಅವರುಗಳು ಪ್ರತಿ ವಿದ್ಯಾರ್ಥಿನಿಯರಿಗೆ 8 ರಿಂದ 10 ಸಾವಿರ ರೂ. ಗಳಂತೆ 192 ವಿದ್ಯಾರ್ಥಿನಿಯರಿಗೆ ಒಟ್ಟು ರೂ. 16,30,000 ವಿದ್ಯಾರ್ಥಿ ವೇತನದ ಚೆಕ್ ವಿತರಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯಸ್ಥರಾದ ಬಾಸಿಲ್ ರಾಜನ್ ಮತ್ತು ಸರ್ಫರಾಜ್ ಮತ್ತು ಇತರರು ಉಪಸ್ಥಿತರಿದ್ದರು.


ಚುನಾವಣಾ ಫಲಿತಾಂಶ ಘೋಷಣೆ

ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಚುನಾವಣಾಧಿಕಾರಿ ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಆದೇಶ ಸಂಖ್ಯೆ : ಡಿಆರ್/ಡಿವಿಜಿ/ಜಿ.ಚು/ರಿಆನೇ/ಆಮಂ/17/2021-22, ದಿನಾಂಕ : 18.11.2021 ರನ್ವಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ., ನಲ್ಕುದುರೆ, ಚನ್ನಗಿರಿ ತಾಲ್ಲೂಕು ಇದರ ದಿನಾಂಕ : 08.01.2022 ರಂದು ಗೊತ್ತುಪಡಿಸಿರುವ ಆಡಳಿತ ಮಂಡಲಿ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳಾ, ಹಿಂದುಳಿದ 'ಎ' ಪ್ರವರ್ಗ, ಹಿಂದುಳಿದ 'ಬಿ' ಪ್ರವರ್ಗ, ಸಾಮಾನ್ಯ ಸ್ಥಾನಕ್ಕೆ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಗೆ ಸ್ಪರ್ಧಿಸಿ, ಈ ಕೆಳಕಂಡ ಅಭ್ಯರ್ಥಿಗಳು ಅವಿರೋಧವಾಗಿ ಸಹಕಾರ ಸಂಘಗಳ ನಿಯಮಗಳು 1960, ನಿಯಮ 14 ಜಿ ನಲ್ಲಿನ ಉಪಬಂಧಾನುಸಾರ ನಾನು ಈ ಕೆಳಕಂಡ ಅಭ್ಯರ್ಥಿಗಳು ಅವರ ಹೆಸರಿನ ಎದುರಿನಲ್ಲಿ ತೋರಿಸಿರುವ ಸ್ಥಾನದಿಂದ ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು ಘೋಷಿಸಿರುತ್ತೇನೆ.

ಸಾಲಗಾರರ ಕ್ಷೇತ್ರ


ಜಿ.ಎಂ. ವಿಜಯಕುಮಾರ್
ಅಧ್ಯಕ್ಷರು


ಎ. ದೇವೇಂದ್ರಪ್ಪ
ನಿರ್ದೇಶಕರು


ಟಿ.ಎನ್. ಪ್ರಭಾಕರ್
ನಿರ್ದೇಶಕರು


ಎನ್.ಜಿ. ಮಹಾದೇವಪ್ಪ
ನಿರ್ದೇಶಕರು


ಎನ್.ಜಿ. ಶಂಕರಮೂರ್ತಿ
ನಿರ್ದೇಶಕರು


ಪಿ.ಹೆಚ್. ರೇವಣಸಿದ್ದಪ್ಪ
ಉಪಾಧ್ಯಕ್ಷರು


ಗಣೇಶ ನಾಯ್ಕ
ನಿರ್ದೇಶಕರು


ಟಿ.ಎಸ್. ದೇವೇಂದ್ರಪ್ಪ
ನಿರ್ದೇಶಕರು


ಕೆ.ಪಿ. ಮಂಜುನಾಥ್
ನಿರ್ದೇಶಕರು


ಶ್ರೀಮತಿ ಟಿ.ಎಸ್. ಸುಧಾ
ನಿರ್ದೇಶಕರು



ಶ್ರೀಮತಿ ಬಸವಲಿಂಗಮ್ಮ
ನಿರ್ದೇಶಕರು


ಜಿ.ಟಿ. ಆಂಜನೇಯ
ನಿರ್ದೇಶಕರು, ಸಾಲಗಾರರಲ್ಲದ ಕ್ಷೇತ್ರ

ಗೆಲುವಿಗೆ ಸಹಕರಿಸಿದ ನಲ್ಕುದುರೆ, ತ್ಯಾವಣಿಗೆ, ಮಿಯ್ಯಾಪುರ ಸದಸ್ಯರಿಗೆ ಹೃದಯಪೂರ್ವಕ ಕೃತಜ್ಞತೆಗಳು




ಜನ್ಮದಿನದ ಶುಭಾಶಯಗಳು



ದಿನಾಂಕ 18.01.2022ರಂದು ತಮ್ಮ 77ನೇ ವರ್ಷದ ಜನ್ಮದಿನದ ಸಂಭ್ರಮದಲ್ಲಿರುವ ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಘಟಕದ ಉಪಾಧ್ಯಕ್ಷರೂ, ಹೆಸರಾಂತ ಲೆಕ್ಕ ಪರಿಶೋಧಕರೂ, ಹಿರಿಯ ಕೈಗಾರಿಕೋದ್ಯಮಿಗಳೂ, ನಮ್ಮ ಸಂಘದ ಅಧ್ಯಕ್ಷರೂ ಆಗಿರುವ
ಶ್ರೀಯುತ ಅಥಣಿ ಎಸ್. ವೀರಣ್ಣ
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

ಉಪಾಧ್ಯಕ್ಷರು, ಕಾರ್ಯದರ್ಶಿ, ಕಾರ್ಯಕಾರಿ ಸಮಿತಿ ಮತ್ತು ಸರ್ವ ಸದಸ್ಯರು
ದೊಡ್ಡಪೇಟೆ ಶ್ರೀ ಬಸವೇಶ್ವರ ಸೇವಾ ಸಂಘ, ದಾವಣಗೆರೆ.

# ಬ್ರಹ್ಮಾಕುಮಾರೀಸ್ ಸಂಸ್ಥೆಯಲ್ಲಿ ವಿಶ್ವಾದ್ಯಂತ ಇಂದು ಸ್ಮೃತಿ ದಿನ



ಅಂತರ ರಾಷ್ಟ್ರೀಯ ಅಧ್ಯಾತ್ಮಿಕ ಸೇವಾ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸ್ಥಾಪಕ ರಾದ ಪ್ರಜಾಪಿತ ಬ್ರಹ್ಮಾ ಅವರ ಸ್ಮೃತಿ ದಿನಾಚರಣೆಯು ಇಂದು ನಡೆಯಲಿದೆ.

ಪ್ರಜಾಪಿತ ಬ್ರಹ್ಮಾ ಅವರ ಪೂರ್ವಾಶ್ರಮದ ಹೆಸರು ದಾದಾ ಲೇಖರಾಜ ಎಂದಾಗಿದ್ದು, ಬ್ರಹ್ಮಾಕುಮಾರೀಸ್ ಸಂಸ್ಥೆ ಸ್ಥಾಪನೆ ಮೂಲಕ ಪ್ರಜಾಪಿತ ಬ್ರಹ್ಮಾ ಎಂದಾಗಿದೆ. ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು ನಿರಾಕಾರ ಪರಮ ಪಿತ ಪರಮಾತ್ಮನಿಂದ ಪ್ರಜಾಪಿತ ಬ್ರಹ್ಮಾರವರ ಸಾಕಾರ ಮಾಧ್ಯಮದ ಮೂಲಕ 1937ರಲ್ಲಿ ಸ್ಥಾಪಿಸಲ್ಪಟ್ಟಿತು.

ಇದೀಗ ಈ ಸಂಸ್ಥೆಯು ತನ್ನ 8500 ಶೈಕ್ಷಣಿಕ ಸೇವಾ ಕೇಂದ್ರಗಳ ಮೂಲಕ 132 ದೇಶಗಳಲ್ಲಿ ಈಶ್ವ ರೀಯ ಜ್ಞಾನ ಮತ್ತು ಸಹಜ ರಾಜಯೋಗ ಶಿಕ್ಷಣವನ್ನು ಕಲಿಸುವುದರ ಮೂಲ ಕ ವಿಶ್ವದಲ್ಲಿ ಶಾಂತಿ ಸ್ಥಾಪನೆ ಮಾಡಲು ಸೇವಾ ನಿರತವಾಗಿದೆ. ಪ್ರಜಾ ಪಿತ ಬ್ರಹ್ಮಾ ಬಾಬಾರವರ ಮೂಲಕ ಸ್ವಯಂ ಪರಮಾತ್ಮನೇ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ನೀಡುತ್ತಿರುವ ಅಧ್ಯಾತ್ಮಿಕ ಶಿಕ್ಷಣ ಲಕ್ಷಾಂತರ ಜನರಿಗೆ ನವ ಜೀವನ ನೀಡಿದೆ. ಇದು ಕೇವಲ ಒಬ್ಬರ ಅನುಭವ ವಲ್ಲದೇ, ಸುಮಾರು 11 ಲಕ್ಷ ನಿತ್ಯ ವಿದ್ಯಾರ್ಥಿಗಳ ಅನುಭವವಾಗಿದೆ.

ಪ್ರ ಜಾಪಿತ ಬ್ರಹ್ಮಾರವರು 1969, ಜನವರಿ 18 ರಂದು ಸ್ಥೂಲ ಶರೀರವನ್ನು ತ್ಯಜಿಸಿ ಸೂಕ್ಷ್ಮ ಶರೀರ ಧಾರಿಯಾಗಿ ಇಂದಿಗೂ ಈಶ್ವರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಈ ದಿನವನ್ನು ಬ್ರಹ್ಮಾಕುಮಾರೀಸ್ ಸಂಸ್ಥೆಯು ವಿಶ್ವಶಾಂತಿ ದಿನವನ್ನಾಗಿ ವಿಶ್ವಾದ್ಯಂತ ಎಲ್ಲಾ ಈಶ್ವರೀಯ ವಿಶ್ವ ವಿದ್ಯಾಲಯಗಳಲ್ಲಿ ಆಚರಿಸಲಾಗುತ್ತಿದೆ ಎಂದು ಸಂಸ್ಥೆಯ ದಾವಣಗೆರೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ವಿವರಿಸಿದ್ದಾರೆ.

# ಕಲಿಕೆಗೆ ಸುಸ್ಥಿರ ನೀತಿಯಿಲ್ಲದೇ ಶಿಕ್ಷಣಕ್ಕೆ ಕಂಟಕ

## ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಕಳವಳ

ದಾವಣಗೆರೆ, ಜ. 17 - ಕೊರೊನಾ ಸಮಯದಲ್ಲಿ ಸುಸ್ಥಿರ ಹಾಗೂ ನಿರಂತರ ಕಲಿಕೆಗಾಗಿ ಸರ್ಕಾರ ನೀತಿಗಳನ್ನು ರೂಪಿಸದ ಕಾರಣದಿಂದಾಗಿ ಮಕ್ಕಳ ಕಲಿಕೆಗೇ ಕಂಟಕವಾಗಿದೆ ಎಂದು ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ ಕಳವಳ ವ್ಯಕ್ತಪಡಿಸಿದೆ.

ಶಾಲಾ ಶುಲ್ಕ, ಅನುಮತಿ ನವೀಕರಣದಿಂದ ಹಿಡಿದು ಕಲಿಕೆ, ಪರೀಕ್ಷೆ ಕೊನೆಗೆ ಟಿ.ಸಿ.ವರೆಗೂ ಸ್ಪಷ್ಟ ನೀತಿಗಳಿಲ್ಲದೇ ಶಾಲಾ ಶಿಕ್ಷಣಕ್ಕೆ ಹಿನ್ನಡೆಯಾಗುತ್ತಿದೆ. ಇಷ್ಟಾದರೂ ಸರ್ಕಾರ ನಿರಂತರ ಕಲಿಕೆಗೆ ಆದ್ಯತೆ ನೀಡುವ ಬದಲು, ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಸಲ್ಲದ ನಿಯಮಗಳನ್ನು ಹೇರುವತ್ತಲೇ ಗಮನ ಹರಿಸುತ್ತಿದೆ ಒಕ್ಕೂಟ ವಿಷಾದ ವ್ಯಕ್ತಪಡಿಸಿದೆ.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿರುವ ಒಕ್ಕೂಟದ ನಿರ್ದೇಶಕ ಹೆಚ್. ಜಯಣ್ಣ, ಸರ್ಕಾರದ ನೀತಿ ಖಾಸಗಿ ಶಾಲೆಗಳನ್ನು ಹತ್ತಿಕ್ಕಲು ಪ್ರಯತ್ನ ಮಾಡಿದಂತಿದೆ. ಅಗ್ನಿಶಾಮಕ ದಳದ ಎನ್.ಒ.ಸಿ. ನಿಯಮ ಸರ್ಕಾರಿ ಶಾಲೆಗಳಿಗೆ ಅನ್ವಯಿಸದೇ ಕೇವಲ ಖಾಸಗಿಯವರಿಗೆ ಅನ್ವಯಿಸಲಾಗುತ್ತಿದೆ. ಟಿ.ಸಿ. ವಿಷಯದಲ್ಲೂ ಅಸ್ಪಷ್ಟ ನಿಲುವು ತಳೆದಿದೆ ಎಂದಿದ್ದಾರೆ.

ಕೊರೊನಾ ಸಮಯದಲ್ಲಿ ಶೇ.70ರಷ್ಟು ಶುಲ್ಕ ಪಾವತಿಯಾಗಿಲ್ಲ. ಆದರೂ ಯಾವ ಮಕ್ಕಳನ್ನೂ ಖಾಸಗಿ ಶಾಲೆಯವರು ಹೊರ ಹಾಕಿಲ್ಲ. ಶಾಲೆಗಳು ಆರ್ಥಿಕವಾಗಿ ಕುಸಿದರೆ ಶಿಕ್ಷಕರು ಬೀದಿ ಪಾಲಾಗುತ್ತಾರೆ ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಶುಲ್ಕದ ವಿಷಯದಲ್ಲಿ ಪೋಷಕರಿಗೆ ತಪ್ಪು ಮಾಹಿತಿ ನೀಡಬಾರದು ಎಂದವರು ಹೇಳಿದರು.

ಒಕ್ಕೂಟದ ಉಪಾಧ್ಯಕ್ಷ ಆರ್.ಎಲ್. ಪ್ರಭಾಕರ್ ಮಾತನಾಡಿ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಇಂತಿಷ್ಟೇ ಸೌಲಭ್ಯ ಇರಬೇಕು ಎಂದು ಸರ್ಕಾರ ಕಾನೂನು ಚಾಟಿ ಬೀಸುವ ಬದಲು, ಅಂತಹ ಸೌಲಭ್ಯಗಳನ್ನು ಹೊಂದಲು ನೆರವು ನೀಡಬೇಕು. ನವೋದ್ಯಮಗಳಿಗೆ ನೀಡುವ ಸಹಕಾರವನ್ನೇ ಖಾಸಗಿ ಶಾಲೆಗಳಿಗೂ ನೀಡಬೇಕು. ಸರ್ಕಾರ ಹಾಗೂ ಖಾಸಗಿಯವರು ಜೊತೆಯಾಗಿ ಸಾಗಿದರೆ ಶಿಕ್ಷಣದಲ್ಲಿ ದೊಡ್ಡ ಸಾಧನೆ ಮಾಡಬಹುದು ಎಂದು ಅಭಿಪ್ರಾಯ ಪಟ್ಟರು.

ಒಕ್ಕೂಟದ ನಿರ್ದೇಶಕರಾದ ಸಹನಾ ರವಿ ಮಾತನಾಡಿ, ಸರ್ಕಾರದ ಅಸ್ಪಷ್ಟ ನೀತಿಯಿಂದಾಗಿ ಪೋಷಕರು ಗೊಂದಲಕ್ಕೆ ಸಿಲುಕಿ, ಶುಲ್ಕ ಪಾವತಿಸುತ್ತಿಲ್ಲ. ಶುಲ್ಕವೇ ಬರದ ಸಂದರ್ಭದಲ್ಲಿ ಎನ್.ಒ.ಸಿ. ಪಡೆಯುವ ಸಲುವಾಗಿ ಹೊಸ ಕಟ್ಟಡ ಕಟ್ಟಲು ಸಾಧ್ಯವೇ? ಸಾಕಷ್ಟು ಸರ್ಕಾರಿ ಶಾಲೆಗಳು ಕುಸಿಯುವ ಹಂತದಲ್ಲಿವೆ. ಈ ಬಗ್ಗೆ ಏಕೆ ಗಮನ ಹರಿಸುತ್ತಿಲ್ಲ? ಎಂದು ಪ್ರಶ್ನಿಸಿದ್ದಾರೆ.

ಹತ್ತನೇ ತರಗತಿ ಪರೀಕ್ಷೆಗೆ ಇನ್ನೆರಡು ತಿಂಗಳು ಮಾತ್ರ ಉಳಿದಿದೆ. ಈ ಸಂದರ್ಭದಲ್ಲಿ ಶಾಲೆಗಳನ್ನು ಮುಚ್ಚುವ ಬದಲು, ಕಲಿಕೆಗೆ ಸರಿಯಾದ ಮಾರ್ಗದರ್ಶನ ಬೇಕಿದೆ. ಮಾಲ್, ದೇವಸ್ಥಾನ ಎಲ್ಲವನ್ನೂ ತೆರೆದಿರುವ ಈ ಸಂದರ್ಭದಲ್ಲಿ ಶಾಲೆಗಳನ್ನು ಮುಚ್ಚುವ ಕ್ರಮಗಳನ್ನು ತೆಗೆದುಕೊಳ್ಳಬಾರದು ಎಂದವರು ಅಭಿಪ್ರಾಯ ಪಟ್ಟರು.

ಶೇ.90ಕ್ಕೂ ಹೆಚ್ಚು ಪೋಷಕರು ನೇರ ಶಿಕ್ಷಣದ ಪರವಾಗಿದ್ದಾರೆ. ಪರೀಕ್ಷೆ ಇಲ್ಲದೇ ಪಾಸ್ ಮಾಡುತ್ತಾರೆ ಎಂಬ ಭಾವನೆಯಿಂದ ಮಕ್ಕಳು ಕಲಿಕೆಯಿಂದ ದೂರವಾಗುತ್ತಿದ್ದಾರೆ. ಇದು ಮಕ್ಕಳನ್ನು ಅನೈತಿಕತೆಗೆ ತಳ್ಳಿದಂತೆ ಎಂದು ಒಕ್ಕೂಟದ ನಿರ್ದೇಶಕ ಬಿ. ಶಶಿಧರ್ ಹೇಳಿದ್ದಾರೆ.

ಖಜಾಂಚಿ ವಿಜಯ್ ರಾಜ್ ಮಾತನಾಡಿ, ಕೊರೊನಾ ಹಿನ್ನೆಲೆಯಲ್ಲಿ ಸಾಲದ ಕಂತುಗಳನ್ನು ಎರಡು ವರ್ಷಗಳವರೆಗೆ ತಡೆಯಬಹುದು ಎಂದು ರಿಸರ್ವ್ ಬ್ಯಾಂಕ್ ನಿರ್ದೇಶನ ನೀಡಿದೆ. ಇಷ್ಟಾದರೂ, ಖಾಸಗಿ ಶಾಲೆಗಳ ಸಾಲದ ವಸೂಲಿಗೆ ಬ್ಯಾಂಕುಗಳು ಇಚ್ಛಾನುಸಾರ ನೋಟಿಸ್ ಕಳಿಸುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

# ಶತಾಯುಷಿ ಸಿದ್ಧರಾಮಣ್ಣ ಶರಣರಿಗೆ ಗೌರವ ಸಮರ್ಪಣೆ



ದಾವಣಗೆರೆ, ಜ. 17- ಬಸವಾದಿ ಶರಣ-ಶರಣೆಯರ ವಚನಗಳ ಆಚರಣೆಯಿಂದ ಸಮಾಜದ ಪ್ರಗತಿ ಸಾಧ್ಯ ಎಂದು ನಿವೃತ್ತ ಸಿಟಿಓ ಪಿ. ರುದ್ರಪ್ಪ ತಿಳಿಸಿದರು.

ನಗರದ ಸರಸ್ವತಿ ಬಡಾವಣೆಯಲ್ಲಿ ಬಸವ ಬಳಗ, ಬಸವ ಮಹಾಮನೆ ಯಿಂದ ಶತಾಯುಷಿ ಸಿದ್ಧರಾಮಣ್ಣ ಶರಣರಿಗೆ ಏರ್ಪಡಿಸಿದ್ದ ಗೌರವ ಸಮರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಬಸವ ಬಳಗದ ಅಧ್ಯಕ್ಷ ಎ.ಹೆಚ್. ಹುಚ್ಚಪ್ಪ, ಉಪಾಧ್ಯಕ್ಷ ಮಹಾರುದ್ರಯ್ಯ ಮಾತನಾಡಿ, ಸಿದ್ಧರಾಮಣ್ಣ ಶರಣರು ರಾಜ್ಯದ ಎಲ್ಲಾ ಶರಣರ, ಮಠಾಧೀಶರ ಜೊತೆಗೂಡಿ ಬಸವ ತತ್ವ ಪ್ರಸಾರ ಮಾಡುವುದರಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಭುವನೇಶ್ವರಿ, ಬಸವರಾಜ್, ಜಿ.ಬಿ. ಚಂದ್ರಶೇಖರ್, ಬಿ.ಟಿ. ಪ್ರಕಾಶ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಅಜ್ಜಂಪುರ ಶೆಟ್ರು ಶಂಭುಲಿಂಗಪ್ಪ, ಅಗಡಿ ಮಹಾಂತೇಶ್, ಮತ್ತಿಹಳ್ಳಿಯ ಬಸವ ಬಳಗದವರು ವಚನ ಸಂಗೀತ ಸೇವೆ ಸಲ್ಲಿಸಿದರು. ಸುಮಂಗಲ ಪ್ರಕಾಶ್ ವಂದಿಸಿದರು. ದೀಪ ಪ್ರಭುದೇವ ನಿರೂಪಿಸಿದರು.

# ಇತಿಹಾಸ ದಾಖಲಿಸಿದ ಲಸಿಕಾ ಅಭಿಯಾನ



ದಾವಣಗೆರೆ, ಜ.17- ವಿಶ್ವದಲ್ಲೇ ಭಾರತ ಕೊರೊನಾ ಲಸಿಕೆ ನೀಡುವಲ್ಲಿ ಇತಿಹಾಸ ದಾಖಲಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಥ ನಾಯ ಕತ್ವದಿಂದಾಗಿ ಅಪಾಯಕ್ಕೆ ಸಿಲುಕಬೇಕಾಗಿದ್ದ 135 ಕೋಟಿ ಜನರನ್ನು ಭೀಕರ ಕೋವಿಡ್‌ನಿಂದ ಪಾರು ಮಾಡಲು ಸಾಧ್ಯವಾಯಿತು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ದೇಶದಲ್ಲಿ ಕೊರೊನಾ ಲಸಿಕೆ ಅಭಿಯಾನಕ್ಕೆ ಇದೀಗ ಒಂದು ವರ್ಷ ಪೂರ್ಣಗೊಂಡಿದೆ. ಇದು ವರೆಗೂ 157 ಕೋಟಿಗೂ ಅಧಿಕ ಡೋಸ್‌ಗಳನ್ನು ನೀಡಲಾಗಿದೆ. ಸುಮಾರು 66 ಕೋಟಿ ಜನರು ಸಂಪೂರ್ಣವಾಗಿ ಲಸಿಕೆ ಪಡೆದುಕೊಂಡಿದ್ದಾರೆ. 91 ಕೋಟಿ ಜನರಿಗೆ ಮೊದಲ ಡೋಸ್ ನೀಡಿದ್ದು, ಪ್ರತಿ ನಿತ್ಯ ಸರಾಸರಿ 43 ಲಕ್ಷ ಡೋಸ್‌ಗಳನ್ನು ನಿರ್ವಹಿಸಲಾಗುತ್ತಿದೆ ಎಂದು ವಿವರ ನೀಡಿದರು.

76 ಕೋಟಿಗೂ ಅಧಿಕ ಮಹಿಳೆಯರು ಲಸಿಕೆ ಪಡೆದಿದ್ದು, ಗ್ರಾಮೀಣ ಭಾಗದ ಲಸಿಕಾ ಕೇಂದ್ರಗಳಲ್ಲಿ 99 ಕೋಟಿ ಡೋಸ್ ನೀಡಲಾಗಿದೆ. ಇದರಲ್ಲಿ 3.69 ಲಕ್ಷ ಕ್ಕೂ ಹೆಚ್ಚು ತೃತೀಯ ಲಿಂಗಿಗಳಿಗೆ ಲಸಿಕೆ ನೀಡಲಾಗಿದೆ. ಇದರೊಂದಿಗೆ ಮುಂಚೂಣಿಯ ಕಾರ್ಯಕರ್ತರು, ಆರೋಗ್ಯ ಕಾರ್ಯಕರ್ತರು ಮತ್ತು 60 ವರ್ಷಕ್ಕೂ ಮೇಲ್ಪಟ್ಟ ವೃದ್ಧರು ಬೂಸ್ಟರ್ ಡೋಸ್ ಪಡೆಯುತ್ತಿದ್ದಾರೆ ಎಂದರು.

ಇದುವರೆಗೂ 6 ಲಕ್ಷಕ್ಕೂ ಹೆಚ್ಚು ಕೈದಿಗಳಿಗೆ ಮತ್ತು ಗುರುತಿನ ಚೀಟಿ ಇಲ್ಲದ 67 ಲಕ್ಷ ಜನರಿಗೂ ಲಸಿಕೆ ಹಾಕಲಾಗಿದೆ. ಬುಡಕಟ್ಟು ಜನರಿರುವ ಜಿಲ್ಲೆಗಳಲ್ಲಿ 11 ಕೋಟಿಗೂ ಅಧಿಕ ಜನರು ಲಸಿಕೆ ಪಡೆದಿದ್ದಾರೆ. 40 ಕೋಟಿಗೂ ಅಧಿಕ ಲಸಿಕೆಗಳನ್ನು ಮನೆಯ ಸಮೀಪದ ಲಸಿಕಾ ಕೇಂದ್ರಗಳಲ್ಲಿ ನೀಡಲಾಗಿದೆ.

15 ರಿಂದ 17 ವರ್ಷ ವಯಸ್ಸಿನ ಮಕ್ಕಳಿಗೆ ವ್ಯಾಕ್ಸಿನೇಷನ್ ಪ್ರಾರಂಭವಾಗಿ ಕೇವಲ 10 ದಿನಗಳಲ್ಲಿ 30 ಮಿಲಿಯನ್‌ಗಿಂತ ಹೆಚ್ಚು ಮಕ್ಕಳಿಗೆ ಮೊದಲ ಡೋಸ್ ನೀಡಲಾಯಿತು. ಇದುವರೆಗೆ 3.31 ಕೋಟಿ ಮಕ್ಕಳಿಗೆ ಲಸಿಕೆ ನೀಡಲಾಗಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಪ್ರತಿನಿತ್ಯ ಕೊರೊನಾ ಲಸಿಕೆಗಳು ವ್ಯರ್ಥವಾಗುತ್ತಿವೆ. ಜಾರ್ಖಂಡ್‌ನಲ್ಲಿ ಶೇ.37.3, ಛತ್ತೀಸ್‌ಘಡದಲ್ಲಿ ಶೇ.30.2, ತಮಿಳುನಾಡಿನಲ್ಲಿ ಶೇ.15.5 ರಷ್ಟು ಲಸಿಕೆ ವ್ಯರ್ಥವಾಗಿದೆ. ಕೆಲವು ದಿನಗಳ ಹಿಂದೆ ರಾಜಸ್ಥಾನದಲ್ಲಿ 11.5 ಲಕ್ಷ ಡೋಸ್ ಲಸಿಕೆ ವ್ಯರ್ಥವಾಗಿದೆ ಎಂದು ಮಾಧ್ಯಮದಲ್ಲಿ ವರದಿಯಾಗಿತ್ತು ಎಂದು ಮಾಹಿತಿ ನೀಡಿದರು.

**ಕಾನೂನು ಎಲ್ಲರಿಗೂ ಒಂದೇ, ಉಲ್ಲಂಘನೆ ಸಲ್ಲದು:** ಪ್ರತಿಯೊಬ್ಬರಿಗೂ ಕಾನೂನು ಒಂದೇ ಆಗಿದ್ದು, ಉಲ್ಲಂಘನೆ ಮಾಡುವುದು ಸರಿಯಲ್ಲ. ಕೋವಿಡ್ ನಿಯಮ ಜಾರಿಯಿದ್ದರೂ ಶಾಸಕರೊಬ್ಬರು ಜನ್ಮದಿನ ಆಚರಿಸಿಕೊಂಡಿರುವ ಬಗ್ಗೆ ಪತ್ರಕರ್ತರು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ಈ ಬಗ್ಗೆ ವಿಷಾದವಿದೆ. ಅಭಿಮಾನಿಗಳ ಒತ್ತಡಕ್ಕೆ ಮಣಿದು ಆಚರಣೆ ಮಾಡಿಕೊಳ್ಳಲಾಗಿದೆ.

ಶಾಸಕ ರಾಮಚಂದ್ರ ಅವರು ಜಗಳೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಅಲ್ಲದೇ ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಸಾಕಷ್ಟು ಆಹಾರದ ಕಿಟ್‌ಗಳನ್ನು ನೀಡಿದ್ದಾರೆ ಎಂದು ವೀರೇಶ್ ಹೇಳಿದರು.

### ಲಸಿಕೆ ಹಾಕುವುದರಲ್ಲಿ ರಾಜ್ಯ ಮುಂಚೂಣಿ

ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಕೊರೊನಾ ಲಸಿಕೆ ಹಾಕುವುದರಲ್ಲಿ ಮುಂಚೂಣಿ ಯಲ್ಲಿದೆ. ರಾಜ್ಯದಲ್ಲಿ 9.1 ಕೋಟಿ ಡೋಸ್ ವಿತರಣೆ ಮಾಡಲಾಗಿದ್ದು, ಶೇ. 99 ರಷ್ಟು 1 ನೇ ಡೋಸ್ ಹಾಗೂ ಶೇ. 83 ರಷ್ಟು 2 ನೇ ಡೋಸ್ ಲಸಿಕೆ ಹಾಕಲಾಗಿದೆ ಎಂದು ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ ತಿಳಿಸಿದರು.

ಜಿಲ್ಲೆಯಲ್ಲಿ ಶೇ. 81 ರಷ್ಟು 1 ನೇ ಡೋಸ್, 15 ರಿಂದ 17 ವರ್ಷ ವಯೋಮಾನದ 84 ಲಕ್ಷ ಕ್ಕೂ ಅಧಿಕ ಲಸಿಕೆ ಹಾಕುವ ಮೂಲಕ ಶೇ. 63 ರಷ್ಟು ಗುರು ಸಾಧಿಸಲಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಶ್ರೀನಿವಾಸ ದಾಸಕರಿಯಪ್ಪ, ಹೆಚ್.ಪಿ. ವಿಶ್ವಾಸ್ ಇದ್ದರು.

# ದೇವಾಸ್ ಮುಚ್ಚುವ ಆದೇಶಕ್ಕೆ ಸುಪ್ರೀಂ ಕೋರ್ಟ್ ಅಸ್ತು

ನವದೆಹಲಿ, ಜ. 17 - ದೇವಾಸ್ ಮಲ್ಟಿಮೀಡಿಯಾ ಮುಚ್ಚುವಂತೆ ಹೊರಡಿಸಲಾಗಿದ್ದ ಆದೇಶ ಪ್ರಶ್ನಿಸಿ ಕಂಪನಿ ದಾಖಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ನ್ಯಾಯಮೂರ್ತಿ ಹೇಮಂತ್ ಗುಪ್ತ ಹಾಗೂ ನ್ಯಾಯಮೂರ್ತಿ ವಿ. ರಾಮಸುಬ್ರಮಣ್ಯಂ ಅವರನ್ನು ಒಳಗೊಂಡ ಪೀಠವು ದೇವಾಸ್ ದಾಖಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ್ದು, ಕಂಪನಿ ಕಾಯ್ದೆಗಳ ಟ್ರಿಬ್ಯೂನಲ್ ಹೊರಡಿಸಿರುವ ಆದೇಶವನ್ನು ಎತ್ತಿ ಹಿಡಿದಿದೆ. ಇಸ್ರೋದ ವಾಣಿಜ್ಯ ಅಂಗವಾದ ಆಂಟ್ರಿಕ್ಸ್‌ಗೆ ವಂಚಿಸುವ ದುರುದ್ದೇಶದಿಂದ ದೇವಾಸ್ ಕಂಪನಿ ರೂಪಿಸಲಾಗಿತ್ತು. ವಂಚನಾತ್ಮಕವಾಗಿ ಬ್ಯಾಂಡ್‌ವಿಡ್ತ್ ಪಡೆಯಲು ಪ್ರಯತ್ನ ನಡೆಸಲಾಗಿತ್ತಾದರೂ, ಈ ಒಪ್ಪಂದವನ್ನು ಸರ್ಕಾರ ರದ್ದುಗೊಳಿಸಿತ್ತು ಎಂದು ಕಂಪನಿ ಕಾಯ್ದೆಗಳ ಟ್ರಿಬ್ಯೂನಲ್ ತಿಳಿಸಿತ್ತು

# ದೆಹಲಿ, ಮುಂಬೈಗಳಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ತೀವ್ರ ಇಳಿಕೆ

ನವದೆಹಲಿ, ಜ. 17 – ರಾಜಧಾನಿ ದೆಹಲಿ ಹಾಗೂ ಹಣಕಾಸು ರಾಜಧಾನಿಯಾದ ಮುಂಬೈಗಳಲ್ಲಿ ಕಳೆದ ಎರಡು ದಿನಗಳಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ತೀವ್ರವಾಗಿ ಇಳಿಕೆಯಾಗಿದೆ. ಸೋಂಕಿತರಲ್ಲಿ ಬಹಳಷ್ಟು ಜನರು ಚೇತರಿಸಿಕೊಂಡು ಮನೆಗಳಿಗೆ ಮರಳಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಮುಂಬೈನಲ್ಲಿ ಈ ಹಿಂದೆ ಜನವರಿ 7ರಂದು ಅತಿ ಹೆಚ್ಚಿನ 20,971 ಸೋಂಕಿತರು ಕಂಡು ಬಂದಿದ್ದರು. ಭಾನುವಾರ 7,895 ಸೋಂಕಿತರು ಕಂಡುಬಂದಿದ್ದರು. ಸೋಮವಾರ ಸೋಂಕಿತರ ಸಂಖ್ಯೆ ಇನ್ನೂ ಕಡಿಮೆಯಾಗಿ 5,956ಕ್ಕೆ ಇಳಿದಿದೆ.

ದೆಹಲಿಯಲ್ಲೂ ಸೋಂಕಿತರ ಸಂಖ್ಯೆ ಇಳಿಮುಖವಾಗಿದೆ. ಸೋಮವಾರ 12,527 ಸೋಂಕಿತರು ಕಂಡು ಬಂದಿದ್ದರು. ಈ ಹಿಂದೆ ಜನವರಿ 13ರಂದು 28,867 ಸೋಂಕಿತರು ಕಂಡು ಬಂದಿದ್ದರು. ಎರಡೂ ನಗರಗಳ ಆಸ್ಪತ್ರೆಗಳಲ್ಲಿ ಶೇ. 80ರಷ್ಟು ಬೆಡ್‌ಗಳು ಖಾಲಿ ಇವೆ.

# ಸುಪ್ರೀಂ ಕೋರ್ಟ್ ಆನ್‌ಲೈನ್ ವಿಚಾರಣೆಗಾಗಿ ಕಂಪ್ಯೂಟರ್ ಕಡ್ಡಾಯ

### ಮೊಬೈಲ್ ಬಳಸದಂತೆ ನಿರ್ಬಂಧ

ನವದೆಹಲಿ, ಜ. 17 – ವಕೀಲರು ಹಾಗೂ ಕಕ್ಷಿದಾರರು ಆನ್‌ಲೈನ್ ಮೂಲಕ ವಿಚಾರಣೆಗೆ ಹಾಜರಾಗುವಾಗ ಮೊಬೈಲ್ ಬದಲು ಡೆಸ್ಕ್‌ಟಾಪ್ ಇಲ್ಲವೇ ಲ್ಯಾಪ್‌ಟಾಪ್ ಬಳಸುವಂತೆ ಸುಪ್ರೀಂ ಕೋರ್ಟ್ ತಿಳಿಸಿದೆ. ಮೊಬೈಲ್ ಬಳಕೆ ಸಂದರ್ಭದಲ್ಲಿ ಆನ್‌ಲೈನ್ ವಿಚಾರಣೆಗೆ ಅಡ್ಡಿಯಾಗುವ ಬಗ್ಗೆ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರು ಅಸಮಾಧಾನ ವ್ಯಕ್ತಪಡಿಸಿದ್ದರು.

ಎಲ್ಲಾ ವಕೀಲರರು ಹಾಗೂ ಕಕ್ಷಿದಾರರು ಸಿಸ್ಕೋ ವೆಬೆಕ್ಸ್ ಆಪ್ಲಿಕೇಷನ್ ಮೂಲಕ ನ್ಯಾಯಾಲಯದ ವಿಚಾರಣೆಗೆ ವಿಡಿಯೋ ಕಾನ್ಫರೆನ್ಸ್‌ಗೆ ಡೆಸ್ಕ್‌ಟಾಪ್ ಇಲ್ಲವೇ ಲ್ಯಾಪ್‌ಟಾಪ್‌ನಲ್ಲಿ ಸಮರ್ಪಕ ಇಂಟರ್‌ನೆಟ್ ಸಂಪರ್ಕದೊಂದಿಗೆ ಹಾಜರಾಗಬೇಕು ಎಂದು ತಿಳಿಸಲಾಗಿದೆ. ಯಾವುದೇ ಸಮಸ್ಯೆ ಉಂಟಾಗುವುದನ್ನು ತಪ್ಪಿಸಲು ಸ್ಥಿರ ದೂರವಾಣಿಯ ಇಂಟರ್‌ನೆಟ್ ಸೌಲಭ್ಯ ಹೊಂದಿರಬೇಕು ಎಂದು ನ್ಯಾಯಾಲಯ ತಿಳಿಸಿದೆ.

ಸೋಮವಾರ ನ್ಯಾಯಾಲಯದ ವಿಚಾರಣೆ ನಡೆಸುವಾಗ, ದೃಶ್ಯ ಇಲ್ಲವೇ ಧ್ವನಿ ಸಮಸ್ಯೆಯಿಂದಾಗಿ ಹತ್ತು ಪ್ರಕರಣಗಳ ವಿಚಾರಣೆಯನ್ನು ಮುಂದೂಡಲಾಗಿತ್ತು.

ಕೊರೊನಾ ನಂತರ ಮಾರ್ಚ್ 2020ರಿಂದ ಸುಪ್ರೀಂ ಕೋರ್ಟ್ ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಅವಕಾಶ ಕಲ್ಪಿಸಿದೆ. ಓಮಿಕ್ರಾನ್ ಹಿನ್ನೆಲೆಯಲ್ಲಿ, ಜನವರಿ 7ರಿಂದ ಆನ್‌ಲೈನ್ ಮೂಲಕವೇ ಎಲ್ಲ ವಿಚಾರಣೆಗಳನ್ನು ನಡೆಸಲಾಗುತ್ತಿದೆ.

# ಜಿಲ್ಲೆಯಲ್ಲಿ 121 ಕೊರೊನಾ ಪಾಸಿಟಿವ್

ದಾವಣಗೆರೆ, ಜ.17- ಜಿಲ್ಲೆಯಲ್ಲಿ ಸೋಮವಾರ 121 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದೆ. 79 ಜನರು ಗುಣಮುಖರಾಗಿದ್ದು, 905 ಸಕ್ರಿಯ ಪ್ರಕರಣಗಳಿವೆ. ದಾವಣಗೆರೆ ತಾಲ್ಲೂಕಿನಲ್ಲಿ 80, ಹರಿಹರ 9, ಜಗಳೂರು 5, ಚನ್ನಗಿರಿ 3, ಹೊನ್ನಾಳಿ 16 ಹಾಗೂ ಹೊರ ಜಿಲ್ಲೆಯ 8 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.

# ಅರಸಿಕೇರಿ ಪ್ರೌಢಶಾಲೆಯಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ಕೊರೊನಾ



ಹರಪನಹಳ್ಳಿ, ಜ. 17- ತಾಲ್ಲೂಕಿನ ಅರಸಿಕೇರಿ ಖಾಸಗಿ ಪ್ರೌಢ ಶಾಲೆಯಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ಕೋವಿಡ್ ಸಾಂಕ್ರಾಮಿಕ ರೋಗ ದೃಢಪಟ್ಟಿದ್ದು, ಶಾಲೆಗೆ ಎರಡು ದಿನ ರಜೆ ಘೋಷಿಸಲಾಗಿದೆ.

ಗ್ರಾಮದ ಜಿವಿವಿಡಿಎಸ್ ಖಾಸಗಿ ಪ್ರೌಢಶಾಲೆಯಲ್ಲಿ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶೀತ, ನೆಗಡಿ, ಜ್ವರದಂತಹ ಕೋವಿಡ್ ಗುಣ ಲಕ್ಷಣಗಳನ್ನು ಹೊಂದಿದ್ದು, ಪರೀಕ್ಷೆ ಮಾಡಿಸಿದಾಗ 8ನೇ ತರಗತಿಯ ಹಾಗೂ 10ನೇ ತರಗತಿಯ ತಲಾ ಒಬ್ಬರಿಗೆ ಒಟ್ಟು ಇಬ್ಬರು ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದೆ ಎಂದು ತಾಲೂಕು ವೈದ್ಯಾಧಿಕಾರಿ ಹಾಲಸ್ವಾಮಿ ತಿಳಿಸಿದ್ದಾರೆ.

ಈ ಕುರಿತು ಬಿಇಒ ಬಸವರಾಜಪ್ಪ ಪ್ರತಿಕ್ರಿಯೆ ನೀಡಿ, ಜಿವಿವಿಡಿಎಸ್ ಪ್ರೌಢಶಾಲೆಗೆ ಎರಡು ದಿನ ರಜೆ ಘೋಷಿಸಿದ್ದು, ಇಡೀ ಶಾಲೆಗೆ ಸ್ಯಾನಿಟೈಜರ್ ಮಾಡಲು ಗ್ರಾಮ ಪಂಚಾಯ್ತಿಯವರಿಗೆ ಸೂಚಿಸಿದ್ದೇವೆ ಎಂದು ಅವರು ಹೇಳಿದರು. ಕೋವಿಡ್‌ನಿಂದ ಮುಚ್ಚಲ್ಪಟ್ಟ ಶಾಲೆಗೆ ಆರೋಗ್ಯಾಧಿಕಾರಿ ಹಾಲಸ್ವಾಮಿ, ಬಿಇಒ ಬಸವರಾಜಪ್ಪ, ಡಾ. ವೆಂಕಟೇಶ್, ಆರೋಗ್ಯ ಸಿಬ್ಬಂದಿ ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು.

# ರಾಜೇಂದ್ರ ಬಡಾವಣೆಯ ಶ್ರೀ ಬನಶಂಕರಿ ದೇವಿ ಜಾತ್ರೆ ಸಂಪನ್ನ




ದಾವಣಗೆರೆ, ಜ.17- ಬನದ ಹುಣ್ಣಿಮೆ ಪ್ರಯುಕ್ತ ಇಲ್ಲಿನ ಡಿಸಿಎಂ ಟೌನ್ ಶಿಪ್ ಹಿಂಭಾಗದ ರಾಜೇಂದ್ರ ಬಡಾವಣೆಯಲ್ಲಿನ ಶ್ರೀ ಬನಶಂಕರಿ ದೇವಿಯ 8ನೇ ವರ್ಷದ ಮೂರು ದಿನಗಳ ಜಾತ್ರಾ ಮಹೋತ್ಸವ ಕೊರೊನಾ ಮಾರ್ಗಸೂಚಿಯಡಿ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ಮೂರನೇ ದಿನವಾದ ಇಂದು ದೇವಿಗೆ ಪಂಚಾಮೃತ ಅಭಿಷೇಕ, ವಿಶೇಷಾಲಂಕಾರ, ಮಹಾಮಂಗಳಾರತಿ ನೆರವೇರಿತು. ಮಧ್ಯಾಹ್ನ ಅನ್ನ ಸಂತರ್ಪಣೆ ನಡೆಯಿತು. ಸಂಜೆ ದೇವಸ್ಥಾನದ ಸುತ್ತಮುತ್ತಲಿನ ರಾಜಬೀದಿಗಳಲ್ಲಿ ಬನಶಂಕರಿ ಅಮ್ಮನ ಮೆರವಣಿಗೆ ಜರುಗಿತು.

ದೇವಸ್ಥಾನದಲ್ಲಿನ ಬನಶಂಕರಿ ದೇವಿ, ಗಾಯತ್ರಿ ಮತ್ತು ಲಕ್ಷ್ಮಿ ದೇವಿಗೆ ವಿಶೇಷ ಪುಷ್ಪಾಲಂಕಾರ ಮಾಡಲಾಗಿತ್ತು.

# ಕಥಕ್ ಮಾಂತ್ರಿಕ ಬಿರ್ಜು ಮಹಾರಾಜ್ ನಿಧನ



ನವದೆಹಲಿ, ಜ. 17 - ಶಾಸ್ತ್ರೀಯ ನೃತ್ಯವನ್ನು ವಿಶ್ವ ವೇದಿಕೆಗೆ ತಂದ ಹಾಗೂ ಹೊಸ ಪೀಳಿಗೆಯ ವಿದ್ಯಾರ್ಥಿಗಳು ಹಾಗೂ ಪ್ರೇಕ್ಷಕರ ಮನಸೂರೆಗೊಂಡಿದ್ದ ಕಥಕ್ ನೃತ್ಯಪಟು ಬಿರ್ಜು ಮಹಾರಾಜ್ ಸೋಮವಾರ ಬೆಳಗಿನ ಜಾವ ನಿಧನರಾಗಿದ್ದಾರೆ. ಅವರಿಗೆ ಮುಂದಿನ ತಿಂಗಳು 84 ವರ್ಷವಾಗುತ್ತಿತ್ತು.

ಮಹಾರಾಜ್‌ಜೀ ಎಂದೇ ಹೆಸರಾಗಿದ್ದ ಅವರು, ತಮ್ಮ ಕುಟುಂಬ ಹಾಗೂ ಶಿಷ್ಯರ ನಡುವೆ ನಗುತ್ತಲೇ ಕೊನೆ ಕ್ಷಣಗಳನ್ನು ಕಳೆದಿದ್ದಾರೆ.

ಊಟದ ನಂತರ ಅಂತ್ಯಾಕ್ಷರಿ ಹಾಡುತ್ತಿದ್ದಾಗ ಹಠಾತ್ತನೇ ಅಸ್ವಸ್ಥರಾಗಿದ್ದಾರೆ ಎಂದು ಅವರ ಮೊಮ್ಮಗಳು ರಾಗಿಣಿ ಮಹಾರಾಜ್ ಹೇಳಿದ್ದಾರೆ.

ದೇಶದ ಹೆಸರಾದ ಕಲಾವಿದರಲ್ಲಿ ಒಬ್ಬರಾಗಿರುವ ಬಿರ್ಜು ಮಹಾರಾಜ್ ಲಖ್ನೌದ ಕಲ್ಕಾ - ಬಿಂದಾದಿನ್ ಘರಾನಾದವರು. ಅವರು ಠುಮ್ರಿ ಕಲಾವಿದರೂ ಆಗಿದ್ದಾರೆ. ಸತ್ಯಜಿತ್ ರಾಯ್ ಅವರು ಶತರಂಜ್ ಕೆ ಖಿಲಾಡಿ ಚಿತ್ರಕ್ಕಾಗಿ ಅವರು ಹಾಡನ್ನೂ ಹಾಡಿದ್ದಾರೆ.

ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದ ಅವರು, ಕಳೆದ ತಿಂಗಳು ಸಕ್ಕರೆ ಕಾಯಿಲೆ ಹೆಚ್ಚಾಗಿ ಡಯಾಲಿಸಿಸ್‌ಗೆ ಒಳಗಾಗಿದ್ದರು. ಹೃದಯಾಘಾತದಿಂದ ಅವರು ಕೊನೆಯುಸಿರೆಳೆದಿರ ಬಹುದು ಎಂದು ಮೊಮ್ಮಗಳು ರಾಗಿಣಿ ತಿಳಿಸಿದ್ದಾರೆ.


ಅವರ ನಿಧನಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ, ಹಲವು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

# ಪಂಜಾಬ್ ಚುನಾವಣೆ ಮುಂದೂಡಿಕೆ

ನವ ದೆ ಹಲಿ, ಜ. 17 - ರಾಜ್ಯ ಸರ್ಕಾರ ಹಾಗೂ ಹಲವು ಪಕ್ಷಗಳ ಬೇಡಿಕೆ ಯಂತೆ ಪಂಜಾಬ್‌ನಲ್ಲಿ ನಡೆಯುವ ಒಂದೇ ಹಂತದ ಚುನಾ ವಣೆಯನ್ನು ಫೆಬ್ರವರಿ 14ರ ಬದಲು 20ಕ್ಕೆ ಮುಂದೂಡಲಾಗಿದೆ.

ಗುರು ರವಿದಾಸ್ ಜಯಂತಿ ಹಿನ್ನೆಲೆಯಲ್ಲಿ ಚುನಾವಣೆ ಮುಂದೂಡಬೇಕೆಂದು ಬೇಡಿಕೆ ಇಡಲಾಗಿತ್ತು. ಗುರು ರವಿದಾಸ್ ಅವರ ಲಕ್ಷಾಂತರ ಭಕ್ತರು ಫೆಬ್ರವರಿ 16ರಂದು ನಡೆಯಲಿರುವ ಜನ್ಮ ದಿನದ ಹಿನ್ನೆಲೆಯಲ್ಲಿ ಉತ್ತರ ಪ್ರದೇಶದ ವಾರಣಾಸಿಗೆ ತೆರಳುತ್ತಾರೆ. ಈ ಹಿನ್ನೆಲೆಯಲ್ಲಿ ಮುಂದೂಡುವಂತೆ ಮನವಿ ಮಾಡಲಾಗಿತ್ತು.

# ಡಾ. ಹಾಲಸ್ವಾಮಿ ಕಂಬಾಳಿಮಠ್ ಅವರಿಗೆ ಪಿತೃ ವಿಯೋಗ



ಜಗಳೂರು, ಜ.17- ತಾಲ್ಲೂಕಿನ ವೀರಶೈವ ಸಮಾಜದ ಮುಖಂಡರೂ, ದಾವಣಗೆರೆ - ಚಿತ್ರದುರ್ಗ ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘದ ಸಂಸ್ಥಾಪಕ ಅಧ್ಯಕ್ಷರೂ, ಜಗಳೂರಿನ ವಿಶ್ವನಾಥ್ ಮೆಡಿಕಲ್ ಸ್ಟೋರ್ ಮಾಲೀಕರೂ ಆದ ಕೆ.ಎಂ. ವಿಶ್ವನಾಥ ಸ್ವಾಮಿ ಅವರು ಇಂದು ಸಂಜೆ 7.20ಕ್ಕೆ ವಯೋಸಹಜತೆಯಿಂದ ನಿಧನರಾದರು.

ಮೃತರಿಗೆ ಸುಮಾರು 84 ವರ್ಷ ವಯಸ್ಸಾಗಿತ್ತು. ದಾವಣಗೆರೆ ಆರೈಕೆ ಆಸ್ಪತ್ರೆಯ ದಂತ ತಜ್ಞ ಡಾ. ಹಾಲಸ್ವಾಮಿ ಕಂಬಾಳಿಮಠ್ ಅವರೂ ಸೇರಿದಂತೆ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 18ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಜಗಳೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಕೊರೊನಾ ಅವಧಿಯಲ್ಲಿ 16 ಕೋಟಿ ಜನರು ಬಡತನಕ್ಕೆ

ನವದೆಹಲಿ, ಜ. 17 – ಕಳೆದ ಎರಡು ವರ್ಷಗಳ ಕೊರೊನಾ ಅವಧಿಯಲ್ಲಿ ವಿಶ್ವದಾದ್ಯಂತ ಶೇ.99ರಷ್ಟು ಜನರ ಆದಾಯ ಕುಸಿದಿದೆ. 16 ಕೋಟಿ ಜನರು ಬಡತನಕ್ಕೆ ದೂಡಲ್ಪಟ್ಟಿದ್ದಾರೆ. ಇದೇ ವೇಳೆ ವಿಶ್ವದ ಹತ್ತು ಶ್ರೀಮಂತರ ಆಸ್ತಿ ಮೌಲ್ಯ 1.5 ಟ್ರಿಲಿಯನ್ ಡಾಲರ್ (111 ಲಕ್ಷ ಕೋಟಿ ರೂ.) ಪ್ರಮಾಣದಲ್ಲಿ ಹೆಚ್ಚಾಗಿದೆ ಎಂದು ಇತ್ತೀಚಿನ ಅಧ್ಯಯನವೊಂದು ತಿಳಿಸಿದೆ.

ವಿಶ್ವ ಆರ್ಥಿಕ ವೇದಿಕೆಯ ಆನ್‌ಲೈನ್ ದಾವೋಸ್ ಶೃಂಗಸಭೆಯ ಮೊದಲ ದಿನದಂದು ಆಕ್ಸ್‌ಫಾಮ್ ಇಂಟರ್‌ನ್ಯಾಷನಲ್‌ನ 'ಇನಿಕ್ವಾಲಿಟಿ ಕಿಲ್ಸ್' ಎಂಬ ಹೆಸರಿನ ವರದಿಯನ್ನು ಬಿಡುಗಡೆ ಮಾಡಲಾಗಿದೆ. ವರದಿ ಪ್ರಕಾರ ಅಸಮಾನತೆಯಿಂದಾಗಿ ಪ್ರತಿದಿನ 21 ಸಾವಿರ ಜನರು ಸಾವಿಗೀಡಾಗುತ್ತಿದ್ದಾರೆ.

ಆರೋಗ್ಯ ಸೇವೆ, ಲಿಂಗ ಆಧರಿತ ಹಿಂಸಾಚಾರ, ಹಸಿವು ಹಾಗೂ ಪರಿಸರ ಬದಲಾವಣೆಗೆ ಸಿಲುಕಿ ಜಗತ್ತಿನಾದ್ಯಂತ ಸಾವುಗಳು ಸಂಭವಿಸುತ್ತಿವೆ ಎಂದು ವರದಿಯಲ್ಲಿ ಹೇಳಲಾಗಿದೆ.

ಕೊರೊನಾ ಸಮಯದಲ್ಲಿ ವಿಶ್ವದ ಹತ್ತು ಉನ್ನತ ಶ್ರೀಮಂತರ ಆಸ್ತಿ ಮೌಲ್ಯ ಪ್ರತಿ ಸೆಕೆಂಡಿಗೆ 15 ಸಾವಿರ ಡಾಲರ್‌ಗಳ ವೇಗದಲ್ಲಿ ಬೆಳೆದಿದೆ. ಈ ಶ್ರೀಮಂತರು ತಮ್ಮ ಆಸ್ತಿ ಮೌಲ್ಯದ ಶೇ.99.999 ರಷ್ಟನ್ನು ಕಳೆದುಕೊಂಡರೂ ಸಹ, ವಿಶ್ವದ ಶೇ.99ರಷ್ಟು ಜನರಿಗಿಂತ ಶ್ರೀಮಂತರಾಗಿರುತ್ತಾರೆ ಎಂದು ವರದಿಯಲ್ಲಿ ಹೇಳಲಾಗಿದೆ.


ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 15.01.2022ರಂದು ನಿಧನರಾದ
ಶ್ರೀ ಹನುಮಾನ್ ಮೋಟಾರ್ ಸರ್ವೀಸ್ (SHMS) ಮಾಲೀಕರು,
ಹರಿಹರ ನಗರಸಭೆ ಮಾಜಿ ಅಧ್ಯಕ್ಷರಾದ
ಶ್ರೀ ಮನೋಹರ್ ಸಾ ಲದ್ವಾ
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ
ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ
ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಗೌರವಾಧ್ಯಕ್ಷರು, ಕಾರ್ಯದರ್ಶಿ,
ಖಜಾಂಚಿ ಹಾಗೂ ಸರ್ವ ಸದಸ್ಯರುಗಳು
ಹಾಗೂ ಎಲ್ಲಾ ಖಾಸಗಿ ಬಸ್
ಮಾಲೀಕರುಗಳು ದಾವಣಗೆರೆ.
ಜಿಲ್ಲಾ ಖಾಸಗಿ ಬಸ್ ಮಾಲೀಕರ
ಸಂಘ, (ರಿ) ದಾವಣಗೆರೆ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte